ಐಕ್ಯರಂಗ

ರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಂಪುಟ 22 ಸಂಚಿಕೆ 1 ರೂ. 2.00

ದುಡಿಯುವ ಜನಗಳ ಆಂದೋಲನವನ್ನು ವಿಸ್ತಾರಗೊಳಿಸಬೇಕು, ಬಲಿಷ್ಟಗೊಳಿಸಬೇಕು

ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಡಿಸೆಂಬರ್ 15 ಮತ್ತು 16 ರಂದು ವದೆಹಲಿಯಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಮಿತಿ ಕಲ್ಕತ್ತೆಯಲ್ಲಿ ನಡೆದ 16ನೇ ಮಹಾಧಿವೇಶನದ ಂತರದ ಅವಧಿಯ ಬೆಳವಣಿಗೆಗಳನ್ನು ಚರ್ಚಿಸಿತು. ಶೇಷವಾಗಿ ಡಿಸೆಂಬರ್ 11 ರ ಮುಷ್ಕರದ ುಶಸ್ಸಿಗೆ ದೇಶದ ಎಲ್ಲಾ ದುಡಿಯುವ ನವಿಭಾಗಗಳನ್ನು ಅಭಿನಂದಿಸುತ್ತಾ ಅದು ಈ ಂದೋಲನವನ್ನು ವಿಸ್ತಾರಗೊಳಿಸಲು ಹಾಗೂ ಲಿಷ್ಟಗೊಳಿಸಲು ಐದು ಅಂಶಗಳ ರ್ಯಕ್ರಮವನ್ನು ಪಕ್ಷದ ಮುಂದಿಟ್ಟಿದೆ. ಈ ಸಭೆಯ ಂತರ ಹೊರಡಿಸಿದ ಪತ್ರಿಕಾ ಹೇಳಿಕೆಯ ಮುಖ್ಯ ಂಶಗಳನ್ನು ಇಲ್ಲಿ ಕೊಡಲಾಗಿದೆ.

ಡಿಸೆಂಬರ್ 11 ರ ಮುಷ್ಕರವನ್ನು ದೊಡ್ಡ ಪ್ರಮಾಣದಲ್ಲಿ ಯಶಸ್ವಿಗೊಳಿಸಲು ಮುಂದೆ ಬಂದ ಎಲ್ಲಾ ದುಡಿಯುವ ಜನ ವಿಭಾಗಗಳನ್ನು ಹಾಗೂ ಕಾರ್ಮಿಕ ವರ್ಗವನ್ನು ಕೇಂದ್ರ ಸಮಿತಿ ಅಭಿನಂದಿಸಿದೆ. ಈ ಸಾರ್ವತ್ರಿಕ ಮುಷ್ಕರ ಬಿಜೆಪಿ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ಧೋರಣೆಗಳ ದುಷ್ಪರಿಣಾಮಗಳ ಬಗ್ಗೆ ಜನಗಳ ವಿರೋಧದ ಒಂದು ಶಕ್ತಿಶಾಲೀ ಅಭಿವ್ಯಕ್ತಿಯಾಗಿತ್ತು. ದೇಶದ ಹಲವು ಭಾಗಗಳಲ್ಲಿ ವಿಮೆ, ಬ್ಯಾಂಕಿಂಗ್, ಬಂದರುಗಳು, ಸಾರ್ವಜನಿಕ ವಲಯದ ಘಟಕಗಳು, ಕೈಗಾರಿಕಾ ಪ್ರದೇಶಗಳು, ಪ್ಲಾಂಟೇಶನುಗಳು, ಗಣಿಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಕಚೇರಿಗಳಲ್ಲಿ ಸಂಪೂರ್ಣ ಮುಷ್ಕರವಾಗಿರುವುದು ಉದಾರೀಕರಣದ ನೀತಿಯ ವಿರುದ್ಧ ಹರಡಿರುವ ಅಸಂತೃಪ್ತಿ ಹಾಗೂ ಕೋಪದ ಆಳವನ್ನು ತೋರಿಸುತ್ತದೆ.

ತಕ್ಷಣದ ಕೆಲಸ

ಮುಷ್ಕರಕ್ಕೆ ದೊರೆತ ಸ್ಪಂದನವನ್ನು ಪರಿಶೀಲಿಸಿದ ಕೇಂದ್ರ ಸಮಿತಿ ಪಕ್ಷ ವಿವಿಧ ಜನ ವಿಭಾಗಗಳ ತಕ್ಷಣದ ಸಮಸ್ಯೆಗಳನ್ನು ಎತ್ತಿಕೊಳ್ಳಲು ಹಾಗೂ ಜನಗಳ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಾಮೂಹಿಕ ಸಂಘಟನೆಗಳು ಆರಂಭಿಸಬೇಕೆಂದಿರುವ ಹೋರಾಟಗಳ ಪ್ರಯತ್ನಗಳನ್ನು ಬೆಂಬಲಿಸಲು ಸಕ್ರಿಯವಾಗಿ ದುಡಿಯಬೇಕು ಎಂದು ನಿರ್ಧರಿಸಿತು. ಸಿಪಿಐ(ಎಂ) ಮತ್ತು ಎಡಪಕ್ಷಗಳು ಇಂತಹ ಎಲ್ಲಾ ಆಂದೋಲನಗಳನ್ನು ಹಾಗೂ ಹೋರಾಟಗಳನ್ನು ಬಲಿಷ್ಟಗೊಳಿಸಲು ಹಾಗೂ ವಿಸ್ತಾರಗೊಳಿಸಲು ಸಕಲಕ್ರಮಗಳನ್ನು ಕೈಗೊಳ್ಳುತ್ತವೆ. ಕೇಂದ್ರ ಸಮಿತಿ ಈ ಕೆಳಗಿನ ಕೆಲಸಗಳ್ನು ಕೈಗೆತ್ತಿಕೊಳ್ಳಬೇಕು ಎಂದು ಪಕ್ಷಕ್ಕೆ ಕರೆ ನೀಡಿದೆ.

1. ಬಿಜೆಪಿ ಸರಕಾರದ ಆರ್ಥಿಕ ಧೋರಣೆಗಳ ವಿರುದ್ಧ, ನಿರ್ದಿಷ್ಟವಾಗಿ ಸಾರ್ವಜನಿಕ ವಲಯದ ಮೇಲೆ ಧಾಳಿ, ವಿಮಾ ಮಸೂದೆ, ಪೇಟೆಂಟ್ ಮಸೂದೆ ಮತ್ತು ನಿರುದ್ಯೋಗದ ವಿರುದ್ಧ ಸಾಮೂಹಿಕ ಹೋರಾಟಗಳನ್ನು ಮತ್ತು ಜಂಟಿ ಚಳುವಳಿಗಳನ್ನು ತೀವ್ರಗೊಳಿಸಬೇಕು.
2. ಬೆಲೆಯೇರಿಕೆ ವಿರುದ್ಧ, ಕಳ್ಳ ದಾಸ್ತಾನನ್ನು ಹೊರಗೆಳೆಯಬೇಕೆಂದು ಒತ್ತಾಯಿಸಿ, ಲಾಭಕೋರತನವನ್ನು ತಡೆಗಟ್ಟಬೇಕು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು 14 ಜೀವನಾವಶ್ಯಕ ಸರಕುಗಳನ್ನು ಪೂರೈಸುವ ವ್ಯವಸ್ಥೆ ಮಾಡುವ ಮೂಲಕ ಬಲಪಡಿಸಬೇಕು ಎಂದು ಒತ್ತಾಯಿಸಿ ಚಳುವಳಿಗಳನ್ನು ಕಟ್ಟಬೇಕು.
3. ಬಿಜೆಪಿ-ಆರ್‌ಎಸ್‌ಎಸ್-ಶಿವಸೇನೆ ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿರುವ ಹಲ್ಲೆಗಳ ವಿರುದ್ಧ, ಧಾರ್ಮಿಕ ಸ್ಥಳಗಳಲ್ಲಿ ಗಂಭೀರ ಪರಿಸ್ಥಿತಿ ಸೃಷ್ಟಿಸುವ ಪ್ರಯತ್ನಗಳ ವಿರುದ್ಧ ಹಾಗೂ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ತೂರಿಕೊಳ್ಳುವುದರ ವಿರುದ್ಧ ಹೋರಾಟ ನಡೆಸಬೇಕು.
4. ಸಿಟಿಬಿಟಿಗೆ ಸಹಿ ಮಾಡಬೇಕೆಂಬ ಅಮೆರಿಕನ್ ಒತ್ತಡಕ್ಕೆ ತಲೆ ಬಾಗುವುದರ ವಿರುದ್ಧ ಹಾಗೂ ಅಮೆರಿಕಾ ಕೈಗೊಂಡಿರುವ ನಿರ್ಬಂಧ ಮತ್ತಿತರ ವೈಷಮ್ಯಪೂರ್ಣ ಕ್ರಮಗಳನ್ನು ವಿರೋಧಿಸಿ ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಢೀಕರಿಸಬೇಕು.
5. ಮಹಿಳೆಯರ ಹಕ್ಕುಗಳು, ದಲಿತರ ಹಕ್ಕುಗಳು, ಸಾಮಾಜಿಕ ದಮನ ಹಾಗೂ ಜನಸಾಮಾನ್ಯರಿಗೆ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಬೇಕು.

ಮೂರನೇ ಪರ್ಯಾಯ

ಡಿಸೆಂಬರ್ 11ರ ಸಾರ್ವತ್ರಿಕ ಮುಷ್ಕರಕ್ಕೆ ಹಲವಾರು ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಪಕ್ಷಗಳು ಬೆಂಬಲ ನೀಡಿರುವುದು ಹಾಗೂ ಸಂಸತ್ತಿನೊಳಗೆ ಈ ಶಕ್ತಿಗಳ ನಡುವೆ ಹೆಚ್ಚುತ್ತಿರುವ ಸಹಕಾರರ ಮೂರನೇ ಪರ್ಯಾಯವನ್ನು ಮತ್ತೆ ಬೆಸೆಯುವ ಪ್ರಶ್ನೆಯ ಪ್ರಸ್ತುತತೆಯನ್ನು ಹಾಗೂ ಅಗತ್ಯವನ್ನು ಎತ್ತಿ ತೋರಿದೆ. ಕೇಂದ್ರ ಸಮಿತಿ ಇಂತಹ ಎಲ್ಲಾ ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಒಟ್ಟುಗೂಡಿಸುವ ಪ್ರಯತ್ನಗಳನ್ನು ನಡೆಸಲು ನಿರ್ಧರಿಸಿತು. ಜಾತ್ಯಾತೀತತೆಯ ರಕ್ಷಣೆ, ಬಿಜೆಪಿ ಸರಕಾರದ ಆರ್ಥಿಕ ನೀತಿಗಳ ದುಷ್ಪರಿಣಾಮಗಳು ಹಾಗೂ ಅಮೆರಿಕನ್ ಸಾಮ್ರಾಜ್ಯಶಾಹಿ ಒತ್ತಡಗಳಿಗೆ ಪ್ರತಿರೋಧ - ಹೀಗೆ ಈ ಶಕ್ತಿಗಳು ಒಂದುಗೂಡಲು ಆಧಾರವಾಗುವ ಹಲವು ಪ್ರಶ್ನೆಗಳಿವೆ.

ಪುಟ 4 ನೋಡಿ

ಪೇಟೆಂಟ್ ಕಾನೂನು ತಿದ್ದುಪಡಿ

ದೇಶ ಮಾರಲು ಕಾಂಗ್ರೆಸ್ - ಬಿಜೆಪಿ ಸ್ಪರ್ಧೆ!

ಮೂರು ವರ್ಷಗಳ ಹಿಂದೆ ತಾನೇ ಬಲವಾಗಿ ವಿರೋಧಿಸಿದ್ದ ಪೇಟೆಂಟ್ ತಿದ್ದುಪಡಿ ಮಸೂದೆಯನ್ನು ಬಿಜೆಪಿ ನೇತೃತ್ವದ ಸಮ್ಮಿಶ್ರಕೂಟದ ಸರಕಾರ ಕಳೆದ ವಾರ ರಾಜ್ಯ ಸಭೆಯಲ್ಲಿ ಮಂಡಿಸಿತು. ಈ ತಿದ್ದುಪಡಿ ಮಸೂದೆಯನ್ನು ಆಗ ಮಂಡಿಸಿ ವಿಫಲಗೊಂಡಿದ್ದ ಕಾಂಗ್ರೆಸ್(ಐ) ಬಳಿ ಈಗ ಹೋಗಿ 'ದಯವಿಟ್ಟು ಇದನ್ನು ಬೆಂಬಲಿಸಿ' ಎಂದು ಅಂಗಲಾಚಿತು. ಕಾಂಗ್ರೆಸ್ (ಐ) ತನ್ನ ಶಕ್ತಿ ಮೆರೆಸಲು ತಿದ್ದುಪಡಿಗೊಂದು ತಿದ್ದುಪಡಿ ಸೂಚಿಸಲು ನಿರ್ಧರಿಸಿತು. ಬಿಜೆಪಿ ತಟ್ಟನೇ ಒಪ್ಪಿಕೊಂಡಿತು. ರಾಜ್ಯ ಸಭೆಯಲ್ಲಿ ಹಿಂದೆಯೂ ಇದನ್ನು ಬಲವಾಗಿ ವಿರೋಧಿಸಿದ್ದ ಎಡಪಕ್ಷಗಳು, ಜನತಾದಳ, ಸಮಾಜವಾದಿ ಪಾರ್ಟಿ, ಆರ್.ಜೆ.ಡಿ. ಸದಸ್ಯರು ಈಗ ಮತ್ತೆ ಅದೇ ವಾದಗಳನ್ನು ಮುಂದಿಟ್ಟು ವಿರೋಧಿಸಿದ್ದರೂ ಕಾಂಗ್ರೆಸ್ ಮತ್ತು ಬಿಜೆಪಿ ದೇಶದ ಸಾರ್ವಭೌಮತೆಯ ಮೇಲೆ ಧಾಳಿ ಮಾಡುವಲ್ಲಿ ಶಾಮೀಲಾಗಿರುವುದರಿಂದ ದೇಶದ ಮೇಲೆ, ಅದರಲ್ಲೂ ಕೃಷಿ ಮತ್ತು ಸಾರ್ವಜನಿಕ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುವ ಈ ತಿದ್ದುಪಡಿ ಹೆಚ್ಚಿನ ಚರ್ಚೆಯಿಲ್ಲದೆ ಅಂಗೀಕಾರವಾಯಿತು.

ಆರು ರಾಜ್ಯಗಳ - ಆಂಧ್ರಪ್ರದೇಶ, ತಮಿಳು ನಾಡು, ಕೇರಳ, ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾ - ಮುಖ್ಯಮಂತ್ರಿಗಳು ಈ ಮಸೂದೆಯಲ್ಲಿನ ವಿಷಯಗಳು ರಾಜ್ಯದ ಅಧಿಕಾರ ವ್ಯಾಪ್ತಿಯಲ್ಲಿರುವುದರಿಂದ ತರಾತುರಿಯಿಂದ ಇದನ್ನು ಅಂಗೀಕರಿಸಬಾರದು ಎಂದು ಕೇಂದ್ರಕ್ಕೆ ಪತ್ರ ಬರೆದಿದ್ದರು. ನಮ್ಮ ಸಂವಿಧಾನದ ಪ್ರಕಾರ ರಾಜ್ಯ ಸರಕಾರಗಳಿಗೆ ಕೃಷಿ ಮತ್ತು ಸಾರ್ವಜನಿಕ ಆರೋಗ್ಯ ವಲಯದಲ್ಲಿ ಪ್ರಧಾನ ಜವಾಬ್ದಾರಿಗಳಿವೆ. ಆದ್ದರಿಂದ ಕೃಷಿ-ರಾಸಾಯನಿಕ ಮತ್ತು ಔಷಧಿ ವಲಯಗಳಲ್ಲಿ ವಿದೇಶಿ ಕಂಪನಿಗಳಿಗೆ ವಿಶೇಷ ಮಾರಾಟದ ಹಕ್ಕು ನೀಡುವುದನ್ನು ರಾಜ್ಯ ಸರಕಾರಗಳೂ ಕೂಲಂಕುಷವಾಗಿ ಚರ್ಚಿಸ ಬೇಕಾಗಿದೆ. ಇತ್ತೀಚೆಗೆ ತನ್ನ ವರದಿ ಮಂಡಿಸಿದ ವಾಣಿಜ್ಯ ಕುರಿತ ಸಂಸತ್ತಿನ ಸ್ಥಾಯೀ ಸಮಿತಿಯೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದೆ ಎಂದು ನೆನಪಿಸಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿಬಸು ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ, ಮುಖ್ಯಮಂತ್ರಿಗಳ ಸಮ್ಮೇಳನ ಅಥವಾ ಅಂತರ-ರಾಜ್ಯ ಮಂಡಳಿ ಸಭೆ ಕರೆದು ಚರ್ಚಿಸಬೇಕು ಎಂದು ಪ್ರಧಾನಮಂತ್ರಿಗಳಿಗೆ ಬರೆದ ಪತ್ರದಲ್ಲಿ ಕಳಕಳಿಯಿಂದ ವಿನಂತಿಸಿಕೊಂಡಿದ್ದರು. ರಾಜ್ಯಸಭೆಯಲ್ಲಿ ಸಿಪಿಐ(ಎಂ) ಸದಸ್ಯರಾದ ಡಾ. ಅಶೋಕ್ ಮಿತ್ರರವರು ಈ ವಿಷಯದತ್ತ ಗಮನಸೆಳೆದರು. ಈ ಬಗ್ಗೆ ರಾಷ್ಟ್ರೀಯ ಚರ್ಚೆ ಅಗತ್ಯ ಎಂಬ ಅವರ ಮಾತನ್ನೂ ಲೆಕ್ಕಿಸದೆ ಬಿಜೆಪಿ ಕಾಂಗ್ರೆಸ್ ಶಾಮೀಲಿನಿಂದ ರಾಜ್ಯಸಭೆಯಲ್ಲಿ ತರಾತುರಿಯಿಂದ ಇದು ಮಂಜೂರಾಯಿತು.

ಆದರೆ ಲೋಕಸಭೆಯಲ್ಲಿ ಇದನ್ನು ಇನ್ನೂ ಮಂಡಿಸಿಲ್ಲ. ರಾಜ್ಯಸಭೆಯಲ್ಲಿ ಬಿಜೆಪಿ-ಕಾಂಗ್ರೆಸ್ ತೋರಿದ ತರಾತುರಿ ಇಲ್ಲಿ ಮಾಯವಾಯಿತು. ಏಕೆ! ಇದಕ್ಕೆ ಈಗ ಬಿಜೆಪಿ ಮತ್ತು ಕಾಂಗ್ರೆಸ್ ಪರಸ್ಪರ ದೂರಿಕೊಳ್ಳುತ್ತಿವೆ. ಬಿಜೆಪಿ ಮಂದಿ ಕಾಂಗ್ರೆಸ್ಸಿನವರು ಕೊನೆ ಗಳಿಗೆಯಲ್ಲಿ ತಮ್ಮ ಮಾತು ತಪ್ಪಿಸಿದುದರಿಂದ ಹೀಗಾಯಿತು ಎಂದರೆ ಕಾಂಗ್ರೆಸ್ ಮಂದಿ ಲೋಕಸಭೆ ಯಲ್ಲಿ ತನಗೆ ಸ್ಪಷ್ಟ ಬಹುಮತ ವಿದ್ದರೂ ಮಂಡಿಸದಿರಲು ಬಿಜೆಪಿಯ ಭಯವೇ ಕಾರಣ ಎಂದಿದೆ. ಈ ಹಿಂದೆ ಈ ಮಸೂದೆಯನ್ನು ವಿರೋಧಿಸಿದ್ದ ತನ್ನ ಕೆಲವು ಮಿತ್ರ ಪಕ್ಷಗಳು ವಿರೋಧಿಸಬಹುದೆಂಬ ಭಯದಿಂದ ಬಿಜೆಪಿ ಹೀಗೆ ಮಾಡಲಿಲ್ಲ ಎನ್ನಲಾಗುತ್ತಿದೆ. ಬಿಜೆಪಿ ತನ್ನನ್ನು ಸಮರ್ಥಿಸಿಕೊಳ್ಳಲು ರಾಷ್ಟ್ರಪತಿಗಳ ಅನುಮೋದನೆ ಸಿಗುವಲ್ಲಿ ತಡವಾಯಿತು ಎಂದೂ ಹೇಳಿತು. ರಾಷ್ಟ್ರಪತಿ ಭವನದಿಂದ ಈ ಬಗ್ಗೆ ನಿರಾಕರಣೆ ಬಂದಾಗ ಪಾರ್ಲಿಮೆಂಟರಿ ಮಂತ್ರಿಗಳು 'ಕ್ಷಮೆ' ಕೇಳಿ ಮಂತ್ರಾಲಯದ ಅಧಿಕಾರಿಗಳ ಮೇಲೆ ಗೂಬೆ ಕೂರಿಸಿದ್ದು ಈ ಸರಕಾರ ಆಡಳಿತಕ್ಕೆ ನಾಲಾಯಕ್ಕು ಎಂದು ಮತ್ತೊಮ್ಮೆ ತೋರಿಸಿಕೊಟ್ಟಿದೆಯಷ್ಟೆ.

ವಾಸ್ತವವಾಗಿ ರಾಜ್ಯಸಭೆಯಲ್ಲೂ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳೆರಡೂ ವ್ಹಿಪ್ ಹೊರಡಿಸಿದ್ದವು ಎಂದು ಹೇಳಲಾಗಿದೆ. ರಾಜ್ಯಸಭೆಯಲ್ಲಿ ಚರ್ಚೆಯ ವೇಳೆ ಕಾಂಗ್ರೆಸ್(ಐ)ನ ವಕೀಲ ಕಪಿಲ್ ಸಿಬಾಲ್ ಹಾಗೂ ಬಿಜೆಪಿಯ 'ಸಿದ್ಧಾಂತಿ' ಅರುಣ್ ಶೌರಿ ವಾಕ್ಚಾತುರ್ಯ ಪ್ರದರ್ಶಿಸಿದರೂ ಈ ಮಸೂದೆಯ ಪರವಾಗಿ ಅವರವರ ಪಕ್ಷದವರಿಗೂ ಅದರಿಂದ ಪೂರ್ತಿ ಮನವರಿಕೆಯಾದಂತಿಲ್ಲ. ಇದರಿಂದಾಗಿಯೇ ಲೋಕಸಭೆಯಲ್ಲಿ ಅದು ಮಂಡನೆಯಾಗಲಿಲ್ಲ ಎಂದೂ ಊಹಾಪೋಹವಿದೆ.

ಹೀಗಿದೆ ನಮ್ಮ ದೇಶದ ಎರಡು ದೊಡ್ಡ ಬಂಡವಾಳಶಾಹಿ ಪಕ್ಷಗಳ ಸ್ಥಿತಿ - ದೇಶ ಮಾರುವ ಸ್ಪರ್ಧೆಗಿಳಿದ ಪಕ್ಷಗಳ ಸ್ಥಿತಿ.

ಸರಕಾರಿ ನೌಕರರ ಮುಖಂಡರನ್ನು ಬಿಡುಗಡೆ ಮಾಡಿ

ಸಿಪಿಐ(ಎಂ)ಒತ್ತಾಯ

ವೇತನ ಪರಿಷ್ಕರಣೆ ಸಂಬಂಧಿಸಿದಂತೆ ನೀಡಿದ ಭರವಸೆಯಿಂದ ಹಿಂದಕ್ಕೆ ಸರಿದ ಸಚಿವ ಸಂಪುಟದ ತೀರ್ಮಾನದ ವಿರುದ್ಧ ಕರ್ನಾಟಕ ರಾಜ್ಯ ಸರಕಾರ ನೌಕರರ ಸಂಘಟನೆಯ ಮುಖಂಡರು ಪ್ರತಿಭಟನೆ ಮಾಡುತ್ತಿದ್ದಾಗ ಅದನ್ನು ಬಗೆಹರಿಸುವ ಬದಲಾಗಿ ಮುಖಂಡರನ್ನೇ ಬಂಧನ ಮಾಡಿದ ರಾಜ್ಯ ಸರಕಾರದ ಕ್ರಮವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಉಗ್ರವಾಗಿ ಖಂಡಿಸಿದೆ.

5ನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಲು ಮೊದಲು ಸರಕಾರವು ವಿಳಂಬ ನೀತಿಯನ್ನು ಅನುಸರಿಸಿ ಸರಕಾರಿ ನೌಕರರಲ್ಲಿ ಅತೃಪ್ತಿಯನ್ನು ಹೆಚ್ಚುವಂತೆ ಹಾಗೂ ಆ ಮೂಲಕ ಮುಷ್ಕರವು ಅನಿವಾರ್ಯವಾಗುವಂತೆ ಮಾಡಿತು. ಅನಿರ್ದಿಷ್ಟಾವಧಿ ಮುಷ್ಕರಕ್ಕೆ ರಾಜ್ಯದಾದ್ಯಂತ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿರುವುದನ್ನು ಮನಗಂಡ ಸರಕಾರವು 'ಎಸ್ಮಾ' ಬಳಕೆ ಮಾಡುವುದಾಗಿ ಬೆದರಿಕೆ ಹಾಕಿ ಅದನ್ನು ಜಾರಿ ಮಾಡಿತು. ಇದು ಪ್ರಜಾಪ್ರಭುತ್ವ ಮತ್ತು ಕಾರ್ಮಿಕ ಸಂಘಗಳ ಹಕ್ಕುಗಳ ಮೇಲೆ ಹಾಕಿದ ತೀವ್ರ ಪ್ರಹಾರ ಎಂದು ಸಿಪಿಐ(ಎಂ) ಈಗಾಗಲೇ ಖಂಡಿಸಿದೆ.

ಎರಡು ದಿನಗಳ ಮುಷ್ಕರ ಯಶಸ್ವಿಯಾಗುತ್ತಲೇ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿ ಮಾಡುವುದಾಗಿ ಭರವಸೆ ನೀಡಿದ ಸರಕಾರವು ಅದನ್ನು ಜಾರಿಗೊಳಿಸುವುದರ ಬದಲಾಗಿ ಕೊಟ್ಟ ಮಾತಿಗೆ ತಪ್ಪಿರುವುದಲ್ಲದೆ ನೌಕರರ ಮುಖಂಡರನ್ನು ಬಂಧಿಸಿ ಪ್ರತಿಭಟನೆಯನ್ನು ಹತ್ತಿಕ್ಕುವ ಪ್ರಯತ್ನ ಖೇದಕರ.

ಪರಿಸ್ಥಿತಿಯನ್ನು ತಿಳಿಗೊಳಿಸಲು ಬಂಧಿತರನ್ನು ಕೂಡಲೇ ಬಿಡುಗಡೆಗೊಳಿಸಬೇಕು ಹಾಗೂ ಮಾತುಕತೆಯ ಮೂಲಕ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕೆಂದು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಒತ್ತಾಯಿಸಿದೆ. ನೌಕರರ ಅತೃಪ್ತಿ ತೀವ್ರವಾಗಿರುವುದನ್ನು ಗಮನಿಸಿ ಅದಕ್ಕೆ ಪರಿಹಾರವನ್ನು ಕಾಣದಿದ್ದಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುವುದಕ್ಕೆ ಸರಕಾರವೇ ಹೊಣೆಯಾಗುತ್ತದೆ ಎಂದು ಅದು ಹೇಳಿದೆ.



"ಮೂಲಶಿಕ್ಷಣವನ್ನು ಸಂವಿಧಾನದಲ್ಲಿ ಒಂದ ಮೂಲಭೂತ ಹಕ್ಕಾಗಿ ಮಾಡಬೇಕು. ಎಲ್ಲಾ ನಾಗರೀಕರಿಗೆ ಮೂಲಶಿಕ್ಷಣ ಒದಗಿಸಲು ಬೇಕಾಗುವ ಬಜೆಟ್ಟನ್ನು ಒದಗಿಸುವ ಸಂಪೂರ್ಣ ಸಾಮರ್ಥ್ಯ ಭಾರತಕ್ಕಿದೆ. ಹೀಗಿದ್ದರೂ ಇದನ್ನು ಕಾರ್ಯಾಚರಣೆಗಿಳಿಸದಿದ್ದರೆ ಅದು ನಮ್ಮ ರಾಜಕೀಯ ದಿವಾಳೀಕೋರತನವನ್ನು ತೋರುತ್ತದೆಯಷ್ಟೆ, ಆರ್ಥಿಕ ದಿವಾಳಿಯನ್ನಲ್ಲ"

– ಪ್ರೊ. ಅಮರ್ತ್ಯ ಸೆನ್, ಪ.ಬಂಗಾಳದ 'ಬೋಲ್‌ಪುರ್'ನಲ್ಲಿ ನಾಗರಿಕ ಸನ್ಮಾನ ಸಮಾರಂಭದಲ್ಲಿ.

'ಐಕ್ಯರಂಗ' ದ ಓದುಗರಿಗೆಲ್ಲಾ '99 ರ ಹಾರ್ದಿಕ ಶುಭಾಶಯಗಳು

ವರ್ಷದ ಕ್ಯಾಲೆಂಡರ್-ಪುಟ5

ಮನೆಮುರುಕತನಕ್ಕೆ ಪೇಟೆಂಟ್ ಪಡೆವ ಬಿಜೆಪಿ ಸರ್ಕಾರ

ಕೇಂದ್ರದ ಬಿಜೆಪಿ ಸರ್ಕಾರ ರಾಜ್ಯಸಭೆಯಲ್ಲಿ ಪೇಟೆಂಟ್ ಕಾಯಿದೆಯನ್ನು ಮಂಡಿಸಿದೆ. ಈ ಮಸೂದೆ ಭಾರತೀಯ 1990 ರ ಪೇಟೆಂಟ್ ಕಾಯಿದೆಗೆ ತಿದ್ದುಪಡಿ ಮಾಡಲು ತಂದಿರತಕ್ಕಂತ ಮಸೂದೆ. ಹಿಂದಿನ ಗ್ಯಾಟ್ ಅಥವಾ ಇಂದಿನ ವಿಶ್ವ ವ್ಯಾಪಾರ ಸಂಸ್ಥೆ ಡಬ್ಲ್ಯುಟಿಒ ಗೆ ಭಾರತ ನೀಡಿದ ಭರವಸೆಗೆ ಅನುಗುಣವಾಗಿ ಈ ಮಸೂದೆ ಇದೆ.

ಪೇಟೆಂಟ್ಸ್ (ತಿದ್ದುಪಡಿ) ಮಸೂದೆ 1998 ಎಂಬ ಹೆಸರಿನಲ್ಲಿ ಮಂಡಿಸಲ್ಪಟ್ಟಿರುವ ಈ ಮಸೂದೆ ಪೂರ್ಣ ಮಾರಾಟ ಹಕ್ಕುಗಳನ್ನು ನೀಡಲು ಅವಕಾಶ ಮಾಡಿಕೊಡುತ್ತದೆ. ಔಷಧಿಗಳು ಮತ್ತು ಕೃಷಿ ರಸಾಯನಿಕಗಳ ಮಾರಾಟದ ಪೂರ್ಣ ಹಕ್ಕುಗಳನ್ನು ಈ ಕಾಯಿದೆಯಡಿ ನೀಡಬಹುದಾಗಿದೆ.

ಈ ಮಸೂದೆ ಮಂಡನೆಗೆ ಎಡಪಕ್ಷಗಳು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿವೆ. ಸಿಪಿಐ(ಎಂ) ನ ಸದಸ್ಯರು ರಾಜ್ಯಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಬಾರದೆಂದು ಪಟ್ಟು ಹಿಡಿದು ವಾದ ಮಂಡಿಸಿದ್ದಾರೆ. ಕೃಷಿ ಮತ್ತು ಸಾರ್ವಜನಿಕ ಆರೋಗ್ಯಗಳೆರಡೂ ರಾಜ್ಯ ಗಳಿಗೆ ಸಂಬಂಧಪಟ್ಟ ವಿಷಯಗಳಾದ್ದರಿಂದ ರಾಜ್ಯಗಳೊಡನೆ ಸಮಾಲೋಚಿಸದೆ ಈ ಮಸೂದೆ ಮಂಡನೆ ಮಾಡುವುದು ಸಂವಿಧಾನಕ್ಕೆ ವಿರುದ್ಧವಾದುದು ಎಂದು ಎಡಪಕ್ಷಗಳ ಸದಸ್ಯರು ಪ್ರತಿಭಟನೆ ತೋರಿದ್ದಾರೆ. ಸಿಪಿಐ(ಎಂ)ನ ಅಶೋಕ ಮಿತ್ರ ಈ ಮಸೂದೆ ಮಂಡನೆಯ ವಿರುದ್ಧ ಭಾವಪೂರ್ಣವಾಗಿ ಮಾತನಾಡಿದರು.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳಾದ ಜ್ಯೋತಿಬಸು ಅವರು ಪ್ರಧಾನ ಮಂತ್ರಿ ವಾಜಪೇಯಿಯವರಿಗೆ ಪತ್ರ ಬರೆದು ಕೂಡಲೇ ಮುಖ್ಯಮಂತ್ರಿಗಳ ಸಭೆಯೊಂದನ್ನು ಕರೆದು ಈ ವಿಷಯವನ್ನು ಚರ್ಚಿಸಬೇಕೆಂದು ಆಗ್ರಹ ಪಡಿಸಿದ್ದಾರೆ.

ಹೀಗೆ ಕಂಪನಿಗಳಿಗೆ ಅದರಲ್ಲೂ ವಿದೇಶಿ ಕಂಪನಿಗಳಿಗೆ ಪೂರ್ಣ ಮಾರಾಟದ ಹಕ್ಕುಗಳನ್ನು ನೀಡಿದರೆ ಈ ಉತ್ಪನ್ನಗಳ ಉತ್ಪಾದನೆಯ ಪ್ರಮಾಣ, ಬೆಲೆ ಇತ್ಯಾದಿಗಳನ್ನು ಅವರೇ ನಿರ್ಧರಿಸುವಂತಾಗುತ್ತದೆ. ಭಾರತದ ಕೋಟಿ ಕೋಟಿ ಜನ ಈ ಕಂಪನಿಗಳ ನಿರ್ಧಾರಗಳ ಕಹಿಯನ್ನು ಅನುಭವಿಸಬೇಕಾಗುತ್ತದೆ.

ಉದಾಹರಣೆಗೆ ಔಷಧಿಗಳಲ್ಲಿ ಪೂರ್ಣ ಮಾರಾಟದ ಹಕ್ಕು ಒಂದು ಕಂಪನಿಗೆ ದೊರೆತರೆ ಆ ಕಂಪನಿಗೆ ಆ ಔಷಧಿಯ ಮಾರಾಟದ ವಿಷಯದಲ್ಲಿ ಏಕಸ್ವಾಮ್ಯ ದೊರೆತಂತೆ. ಹಾಗೆ ಏಕಸ್ವಾಮ್ಯ ದೊರೆತ ಕಂಪನಿ ಬೆಲೆಯನ್ನು ತನಗೆ ಬೇಕಾದಂತೆ ನಿರ್ಧರಿಸುತ್ತದೆ. ಇದರಿಂದ ಜನಸಾಮಾನ್ಯರು ಅಪಾರ ನೋವು ಅನುಭವಿಸಬೇಕಾಗುತ್ತದೆ. ಹಾಗೆಯೇ ಕೃಷಿ ರಸಾಯನಿಕಗಳ ವಿಷಯದಲ್ಲೂ ಭಾರತ ರೈತ ಎಂತಹ ಬೆಳೆ ಬೆಳೆಯಬೇಕೆಂಬುದನ್ನು ಪೂರ್ಣ ಮಾರಾಟದ ಹಕ್ಕು ಪಡೆದ ಕಂಪನಿ ನಿರ್ಧರಿಸುವಂತಹ ಪರಿಸ್ಥಿತಿ ಉಂಟಾಗುತ್ತದೆ.

ಈ ಮಸೂದೆಯನ್ನು ಲೋಕಸಭೆ ಆಗಲೇ ಪಾಸ್ ಮಾಡಿದೆ. ರಾಜ್ಯಸಭೆಯಲ್ಲಿ ಹಿಂದಿನ ಕೇಂದ್ರ ಕಾಂಗ್ರೆಸ್ ಸರ್ಕಾರ ಮಸೂದೆ ಮಂಡನೆ ಮಾಡಲು ವಿಫಲವಾಗಿತ್ತು. ಈ ಬಿಜೆಪಿ ಸರ್ಕಾರ ಈ ಕೆಲಸ ಮಾಡಿದೆ. ಬಿಜೆಪಿ ಮತ್ತು ಕಾಂಗ್ರೆಸ್‌ಗಳೆರಡೂ ಈ ಮಸೂದೆಗೆ ಬೆಂಬಲ ನೀಡಿವೆ. ಎಡಪಕ್ಷಗಳು ಮತ್ತು ಡಿಎಂಕೆ ಇದನ್ನು ವಿರೋಧಿಸಿವೆ.

ಭಾರತ ವಿಶ್ವ ವ್ಯಾಪಾರ ಸಂಸ್ಥೆಗೆ ಈ ವಿಷಯದಲ್ಲಿ ಭರವಸೆ ನೀಡಿತ್ತು. ವಿಶ್ವ ವ್ಯಾಪಾರ ಸಂಸ್ಥೆ 1999 ರ ಏಪ್ರಿಲ್ 19 ರ ವರೆಗೆ ಅಂತಿಮ ಗಡುವನ್ನು ನೀಡಿತ್ತು.


ಭಾರತದ ಮಾರುಕಟ್ಟೆಯ ಮೇಲೆ ಕಣ್ಣಿಟ್ಟಿರುವ ಅಮೇರಿಕ ಮತ್ತು ಯುರೋಪಿನ ಬಹುರಾಷ್ಟ್ರೀಯ ಕಂಪನಿಗಳು ವಿಶ್ವ ವ್ಯಾಪಾರ ಸಂಸ್ಥೆಯ ಮೂಲಕ ಮತ್ತು ನೇರವಾಗಿ ತೀವ್ರವಾಗಿ ಒತ್ತಡ ಹೇರುತ್ತಲೇ ಇದ್ದವು. ಈ ಒತ್ತಡದ ಪರಿಣಾಮ ಮತ್ತು ಬಿಜೆಪಿ ಸರ್ಕಾರದ ಮನೆಮುರುಕತನದ ಪರಿಣಾಮವಾಗಿ, ಈ ಮಸೂದೆ ಮಂಡನೆಯಾಗಿದೆ.

ಪಾತಾಳ ನೋಡುತ್ತಿರುವ ಉತ್ಪಾದನೆ

ಏಪ್ರಿಲ್ - ಅಕ್ಟೋಬರ್ 98 ರ ವರೆಗಿನ ಉತ್ಪಾದನೆ ಮಟ್ಟ ನೋಡಿದರೆ ಅದು ಪಾತಾಳ ಮುಖಿಯಾಗಿರುವುದು ಕಂಡುಬರುತ್ತದೆ. ತೀವ್ರ ಹಿಂಜರಿತ ಕಾಣುತ್ತಿರುವ ಆರ್ಥಿಕದಲ್ಲಿ ಇದು ಹೊಸ ವಿಷಯವೇನಲ್ಲ. ಅಸ್ಸೋಕ್ರೆನ್ ಎಂಬ ಉದ್ಯಮಿಗಳ ಸಂಸ್ಥೆಯ ಪ್ರಕಾರ ದೇಶದಲ್ಲಿ ಒಟ್ಟು 52 ವಲಯಗಳಲ್ಲಿ ಉತ್ಪಾದನೆ ಕಡಿಮೆಯಾಗಿದ್ದರೆ 37 ವಲಯಗಳಲ್ಲಿ ಅಲ್ಪ ಪ್ರಮಾಣದ ಹೆಚ್ಚಳ ಕಂಡುಬಂದಿದೆ. ಒಂದು ವಲಯದಲ್ಲಿ ಅದು ಹಿಂದಿನ ವರ್ಷದಲ್ಲಿದ್ದಂತೆ ಇದೆ.

ಹೆಚ್ಚಳ ಕಂಡಿರುವ ವಲಯಗಳಲ್ಲಿ ವಾಹನಗಳ ವಲಯವೂ ಒಂದು. ಆದರೆ ಈ ಹೆಚ್ಚಳಕ್ಕೆ ಕಾರಣ ದ್ವಿಚಕ್ರ ವಾಹನಗಳ ಉತ್ಪಾದನೆಯಲ್ಲಿ ಮಾತ್ರ ಹೆಚ್ಚಳ ಆಗಿದೆ. ಇದರಿಂದಾಗಿಯೇ ವಾಹನಗಳ ವಲಯದಲ್ಲೂ ಅಲ್ಪ ಹೆಚ್ಚಳ ಕಂಡುಬಂದಿರುವುದು.

ಏನೇ ಇರಲಿ, ಬಿಜೆಪಿ ಸರ್ಕಾರದಡಿ ದೇಶದ ಒಟ್ಟಾರೆ ಆರ್ಥಿಕವೇ ಪಾತಾಳ ನೋಡುತ್ತಿರುವುದು ದೇಶದ ಜನಸಾಮಾನ್ಯರು/ದುಡಿಯುವ ಜನತೆ ನರಳುತ್ತಿರುವುದು ಹಾಗೂ ನೋವಿನಿಂದಾಗಿ ತೀವ್ರ ಪ್ರತಿರೋಧ ತೋರಿಸುತ್ತಿರುವುದು ಎಲ್ಲವೂ ವಾಸ್ತವವಾಗಿದೆ.



ಗಗನಕ್ಕೇರುತ್ತಿರುವ ಬಿಜೆಪಿ ಸರ್ಕಾರದ ಖರ್ಚುಗಳು

ಸರ್ಕಾರಿ ವೆಚ್ಚಗಳು ಅದರಲ್ಲೂ ಯೋಜನೇತರ ವೆಚ್ಚಗಳು ಹಿಡಿತದಲ್ಲಿರಬೇಕು ಮತ್ತು ಬಹಳ ಕಡಿಮೆ ಪ್ರಮಾಣದಲ್ಲಿರಬೇಕು ಎಂಬುದು ಉದಾರೀಕರಣವಾದಿಗಳು ಹಾಕಿಕೊಂಡ ಸಂಹಿತೆ. ಹಾಗೆ ಸರ್ಕಾರದ ಅನಾವಶ್ಯಕ ವೆಚ್ಚಗಳು ಬಹಳ ಕಡಿಮೆ ಇರಬೇಕು ಎಂಬುದಕ್ಕೆ ಎರಡು ಮಾತೇ ಇಲ್ಲ. ಸರ್ಕಾರದ ಹೂಡಿಕೆ ಹೆಚ್ಚಾಗಬೇಕು ಅಂದರೆ ಅದು ಉತ್ಪಾದಕತೆ ಹೆಚ್ಚಿಸುತ್ತದೆ ಜೊತೆಗೆ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂದು ಎಡಪಕ್ಷಗಳು ಮೊದಲಿನಿಂದಲೂ ನಿಲುವು ತೆಗೆದುಕೊಂಡು ಬಂದಿವೆ.

ಹಿಂದಿನ ಬಜೆಟ್ಟಿನಲ್ಲಿ ಬಿಜೆಪಿ ಸರ್ಕಾರವೇ ಕೇಂದ್ರ ಸರ್ಕಾರದ ವೆಚ್ಚದಲ್ಲಿ ಶೇ 14 ರಷ್ಟು ಮಾತ್ರ ಬೆಳವಣಿಗೆ ಇರಬೇಕು ಎಂದು ಒಪ್ಪಿಕೊಂಡು ಮಿತಿ ಸೂಚಿಸಿಕೊಂಡಿತ್ತು. ಆದರೆ ಈಗ ಅದೇ ಸರ್ಕಾರದ ವೆಚ್ಚಗಳು ಬೆಳವಣಿಗೆ ಶೇ 27 ರಷ್ಟು ಬೆಳವಣಿಗೆ ಕಾಣುತ್ತಿದೆ ಎಂದರೆ ಬಿಜೆಪಿ ಸರ್ಕಾರ ದೇಶದ ಹಣಕಾಸನ್ನು ಹೇಗೆ ನಿರ್ವಹಿಸುತ್ತದೆ ಎಂಬುದು ಸ್ಪಷ್ಟವಾಗಿ ಗೊತ್ತಾಗಿಬಿಡುತ್ತದೆ.

ಅಕ್ಟೋಬರ್ ಕೊನೆಯ ವೇಳೆಗೆ ಸರ್ಕಾರ ಬಜೆಟ್ಟಿನಲ್ಲಿ ಅನುಮೋದಿಸಿದ್ದ ಮೊತ್ತದ ಶೇ 32 ರಷ್ಟನ್ನು ಆಗಲೇ ವೆಚ್ಚ ಮಾಡಿತ್ತು. ಹಿಂದಿನ ಸಾಲಿನಲ್ಲಿ ಶೇ 46 ರಷ್ಟನ್ನು ಮಾತ್ರ ವೆಚ್ಚ ಮಾಡಲಾಗಿತ್ತು.

ಈ ವೆಚ್ಚದ ಬಹುಪಾಲು ಯೋಜನೇತರ ವೆಚ್ಚಗಳದ್ದು. ಯೋಜನೇತರ ವೆಚ್ಚಗಳು ಹೆಚ್ಚಿದಾಗ ಯೋಜನಾ ವೆಚ್ಚಗಳಿಗೆ ಲಭ್ಯವಿರುವ ಹಣಕಾಸು ಕಡಿಮೆಯಾಗಬಹುದು. ಆಗ ಯೋಜನೆಗಳಲ್ಲಿ ಕಡಿತವಾಗಿ ಆ ಮೂಲಕ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಬಹುದು. ಈ ಎಲ್ಲ ಹೆಚ್ಚಿನ ವೆಚ್ಚಗಳಿಗೆ ಸರ್ಕಾರ ಅವಲಂಬಿಸಿರುವ ಮುಖ್ಯ ಹಣಕಾಸು ಮೂಲ ಯಾವುದು ಗೊತ್ತೆ? ಎಂಟು ಸಾರ್ವಜನಿಕ ವಲಯದ ಉದ್ದಿಮೆಗಳ ಮಾರಾಟ. ಈ ಮಾರಾಟದ ಮೂಲಕ ಬಂದ ಹಣವನ್ನು ತನ್ನ ಅಂದಾದುಂದಿ ವೆಚ್ಚಗಳಿಗೆ ಬಳಸಿಕೊಳ್ಳುತ್ತಿದೆ ಸರ್ಕಾರ. ಸಾರ್ವಜನಿಕ ವಲಯದ ಉದ್ದಿಮೆಗಳ ಮಾರಾಟದ ಹಣ ಯಾವ ರೀತಿಯಲ್ಲಿ ಉಪಯೋಗಿಸಲ್ಪಡುತ್ತದೆ ಎಂಬುದು ಇದರಿಂದ ಗೊತ್ತಾಗುತ್ತದೆ.

ದೇಶದ ಒಳಿತಿಗಾಗಿಯೇ ಸಾರ್ವಜನಿಕ ವಲಯದ ಘಟಕಗಳ ಮಾರಾಟ ಎಂದು ಉದಾರೀಕರಣವಾದಿಗಳು ಮುಂದಿಡುತ್ತಿದ್ದ ವಾದ ಎಷ್ಟು ಟೊಳ್ಳಾದದ್ದು ಎಂಬುದೂ ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ ಅಲ್ಲವೇ?

ಏನಡುಗೆ ಮಾಡ ಹೊರಟರೂ ಬರುತ್ತದೆ ಕಣ್ಣೀರು

ಈರುಳ್ಳಿ ಹೆಚ್ಚಿದಾಗ ಕಣ್ಣೀರು ಬರುವುದು ಸಹಜ. ಬಿಜೆಪಿಯ ಸರ್ಕಾರದಡಿ ಈರುಳ್ಳಿಯ ಬೆಲೆಗಳು ಎಷ್ಟು ಏರಿದವೆಂದರೆ ಈರುಳ್ಳಿಯನ್ನು ನೆನೆಸಿಕೊಂಡರೂ ಕಣ್ಣೀರು ಬರುವಂತಾಗಿ ಹೋಯಿತು. ಹಾಗಾದರೆ ಬೇರೆ ಅತ್ಯಾವಶ್ಯಕ ಪದಾರ್ಥಗಳ ಬೆಲೆ ಕಡಿಮೆ ಇದೆಯೇ?

ಇಲ್ಲ, ವಿವಿಧ ಪದಾರ್ಥಗಳ ಸಗಟು ಬೆಲೆ ಸೂಚ್ಯಂಕದಲ್ಲಿ ಆದ ಹೆಚ್ಚಳವನ್ನು ಗಮನಿಸಿದರೆ ಹಲವು ಪದಾರ್ಥಗಳು ಕಣ್ಣೀರು ತರಿಸಿಯೇ ತೀರುತ್ತವೆ.

ಅಂಶದಿಂದ ಅಂಶಕ್ಕೆ ಲೆಕ್ಕ ಮಾಡಿದ ಹಣದುಬ್ಬರದ ಪ್ರಮಾಣ ಜೋಳಕ್ಕೆ ಶೇ 24 ಆದರೆ, ತೊಗರಿ ಬೇಳೆಗೆ ಶೇ 4, ಶೇಂಗಾ ಎಣ್ಣೆಗೆ ಶೇ 49 ಆದರೆ, ಸಾಸಿವೆ ಎಣ್ಣೆಗೆ ಈ ಪ್ರಮಾಣ ಶೇ 74 ರಷ್ಟು. ಮೆಣಸಿನಕಾಯಿಗೆ ಶೇ 50 ಆದರೆ, ಚಹಕ್ಕೆ ಶೇ 50 ರಷ್ಟು, ಸೀಮೆಎಣ್ಣೆಗೆ ಶೇ 21 ರಷ್ಟು. ಈರುಳ್ಳಿಗೆ ಬಿಡಿ - ಈ ಪ್ರಮಾಣ ಬರೀ ಶೇ 361 ರಷ್ಟು! ಆಲೂಗೆಡ್ಡೆಗೆ ಶೇ 146 ರಷ್ಟು!

ಇವೆಲ್ಲ ಜನಸಾಮಾನ್ಯರು ದಿನನಿತ್ಯ ಬಳಸುವಂತಹ ವಸ್ತುಗಳು/ಪದಾರ್ಥಗಳು. ಈ ಪದಾರ್ಥಗಳ ಸರಾಸರಿ ಹಣದುಬ್ಬರ ಶೇ 100 ರಷ್ಟು.

ಹೀಗಿರುವಾಗ ಬೆಲೆಯೇರಿಕೆಗೆ ಹೆಚ್ಚಿನ ಪ್ರಮಾಣದಲ್ಲಿ ತನ್ನನ್ನು ಮತದಾರರು ಶಿಕ್ಷಿಸಿದ್ದಾರೆ ಎಂಬ ಬಿಜೆಪಿ ಗೋಳು ಎಷ್ಟು ಸರಿ?

ಅಲ್ಲದೆ ತಜ್ಞರ ಪ್ರಕಾರ ಬೆಲೆ ಏರಿಕೆ ಸೂಚ್ಯಂಕ ಬಳಕೆದಾರ ನೀಡಬೇಕಾದ ಬೆಲೆಯನ್ನು ಪೂರ್ಣವಾಗಿ ಪ್ರತಿಬಿಂಬಿಸುವುದಿಲ್ಲ. ಆದ್ದರಿಂದ ಈ ಅಂಕಿ ಸಂಖ್ಯೆಗಳು ಹೇಳುವುದಕ್ಕಿಂತಲೂ ಹೆಚ್ಚಿನ ನೋವನ್ನು ಜನಸಾಮಾನ್ಯರು ಬಿಜೆಪಿ ಸರ್ಕಾರದಡಿ ಅನುಭವಿಸುತ್ತಿದ್ದಾರೆ. ಆದ್ದರಿಂದಲೇ ಮತದಾರರು ಆ ಪಕ್ಷವನ್ನು ಸಾರಾಸಗಟಾಗಿ ತಿರಸ್ಕರಿಸಿರುವುದು.

ಇದರಲ್ಲೂ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಬಿಜೆಪಿ ಆಡಳಿತದಲ್ಲಿರುವ ರಾಜಸ್ತಾನ, ದೆಹಲಿ, ಹರ್ಯಾಣ ಮತ್ತು ಉತ್ತರ ಪ್ರದೇಶಗಳಲ್ಲೇ ಈ ಬೆಲೆ ಏರಿಕೆಯ ಹಾವಳಿ ಬೇರೆಲ್ಲೆಡೆಗಳಿಂತ ತೀವ್ರವಾಗಿರುವುದು. ಸಾಲದೆ ಬಿಜೆಪಿಯ ಆಡಳಿತಕ್ಕೆ ಈ ಕಿರೀಟ?

---

25 ವರ್ಷಗಳ ಹಿಂದೆ ಚಿಲಿಯಲ್ಲಿ ನಡೆದ ಫ್ಯಾಸಿಸ್ಟ್ ಕ್ಷಿಪ್ರಕ್ರಾಂತಿಯ ನಂತರ ಪಿನೋಚೆ ಸರ್ವಾಧಿಕಾರದಡಿಯ ಕರಾಳ ದಿನಗಳ ಒಂದು ಅನುಭವ - ಕ್ಷಿಪ್ರಕ್ರಾಂತಿಯ ವೇಳೆ ಬ್ರಿಟನ್ನಿನಲ್ಲಿದ್ದು ಸಿಲುಕಿಕೊಂಡಿದ್ದ ಬ್ರಿಟನ್ನಿನ ನಾಗರಿಕ ಮೈಕ್ ಗೇಡ್ಸ್‌ಹೌಸ್‌ನ ಅನುಭವ - ಕಳೆದ ಸಂಚಿಕೆಯಿಂದ ಮುಂದುವರೆದುದು.

ಇತಿಹಾಸದ ಪುಟಗಳಿಂದ

- ವಸಂತ

"ನಾನು ಅದೃಷ್ಟವಂತನಾಗಿದ್ದೆ"

ಅವನಿಗೇನಾಯಿತು ಎಂದು ನನಗೆ ಖಚಿತವಾಗಿ ತಿಳಿಯಲಿಲ್ಲ. ಸ್ಯಾಂಟಿಯಾಗೊಗೆ ಹೋದ ಅಮ್ನೆಸ್ಟಿ ಇಂಟರ್‌ನ್ಯಾಶನಲ್‌ನ ಕಾರ್ಯಕರ್ತನೊಬ್ಬ ವಿಚಾರಿಸಿದಾಗ ಒಬ್ಬ ಪೋಲಿಸ್ ಹೇಳಿದನಂತೆ ನಾವು ಅವನನ್ನು ಸಾಯಿಸಿರಬೇಕು ಎಂದನಂತೆ.

ಮಿಲಿಟರಿ ಕ್ಷಿಪ್ರಕ್ರಾಂತಿ ನಡೆದ ಕೆಲವು ವಾರಗಳ ಮೊದಲಿನ ಚಿಲಿಯಲ್ಲಿನ ಅಪಾಯಕಾರಿ ಪರಿಸ್ಥಿತಿಯನ್ನು ವಿವರಿಸುವುದು ಕಷ್ಟ. ಜೂನ್‌ನಲ್ಲಿ ಫ್ಯಾಸಿಸ್ಟ್ ಪಾರ್ಟಿಯ ಬೆಂಬಲದಿಂದ ಸೈನ್ಯದ ಟ್ಯಾಂಕ್ ರೆಜಿಮೆಂಟ್ ಒಂದು ಕ್ಷಿಪ್ರಕ್ರಾಂತಿಗೆ ಪ್ರಯತ್ನದ ಹಾಸ್ಯಾಸ್ಪದ ಘಟನೆ ನಡೆಯಿತು. ಇದು ಬರಿ ತಲೆತಿರುಕರ ಕೆಲಸ ಎಂದು ಆ ಮೇಲೆ ತಿಳಿಯಿತು.

ಅಲೆಂದೆ ಸರ್ಕಾರಕ್ಕೆ ವಿರೋಧ ಹೆಚ್ಚೆಚ್ಚು ಹಿಂಸಾತ್ಮಕ ರೂಪತಳೆದಿತ್ತು. ಸಾರ್ವಜನಿಕ ಸಂಸ್ಥೆಗಳ ಆಸ್ತಿಗಳ ಮೇಲೆ ದಾಳಿ ಹೆಚ್ಚುತ್ತಿತ್ತು. ಬಲಪಂಥೀಯ ಲಾರಿ ಮತ್ತು ಭೂಮಾಲಿಕರು ರೋಡ್-ಬ್ಲಾಕ್‌ಗಳು ಹಾಕಿದ್ದು, ವಾಹನ ಓಡಾಟ ಕಷ್ಟವಾಗಿತ್ತು. ನಮ್ಮ ಇನ್ಸ್‌ಟಿಟ್ಯೂಟ್‌ನ ವಾಹನಗಳ ಸಂಚಾರ ನಿಂತೇ ಹೋಗಿತ್ತು.



ನಮ್ಮ ಸಂಸ್ಥೆಯಲ್ಲಿ ಸರದಿಯಂತೆ ನಮ್ಮ ಸಂಸ್ಥೆಯನ್ನು ಬುಡಮೇಲು ಕೃತ್ಯಗಳಿಂದ ರಕ್ಷಿಸುವುದಕ್ಕಾಗಿ ಕಾವಲು ಕಾಯುತ್ತಿದ್ದೆವು. ಅಮೆರಿಕದ ಸರ್ಕಾರದ ಕುಮ್ಮಕ್ಕಿನಿಂದ ಆಂತರಿಕ ಯುದ್ಧ ಆರಂಭವಾಗಿದೆ ಎಂದು ನಮಗೆಲ್ಲಾ ಅನ್ನಿಸಹತ್ತಿತ್ತು. ಆದರೂ ಇಷ್ಟು ಬೇಗ ಕ್ಷಿಪ್ರಕ್ರಾಂತಿ ನಡೆದು, ಕೇವಲ 12 ಗಂಟೆಗಳಲ್ಲಿ ಸಂವಿಧಾನ ಬದ್ಧ ಸರ್ಕಾರವನ್ನು ಕಿತ್ತು ಹಾಕಲಾಗುತ್ತಿದೆ ಎಂದು ನಮಗೆ ಗೊತ್ತಿರಲಿಲ್ಲ.

ಸೆಪ್ಟೆಂಬರ್ 11ರ ಹಗಲ ಹೊತ್ತಿಗೆ ಆರಂಭವಾಗಿತ್ತು. ಮಿಲಿಟರಿ ಕ್ಷಿಪ್ರಕ್ರಾಂತಿ ಸಂಜೆಯ ಹೊತ್ತಿಗೆ ಮಿಲಿಟರಿ ಸರ್ಕಾರಕ್ಕೆ ಸಶಸ್ತ್ರ ವಿರೋಧವೇ ಇರಲಿಲ್ಲ ಪ್ರಜಾಸತ್ತೆಗೆ ಹೋರಾಡುವುದೇ ಇರಲಿಲ್ಲ. ಸೈನ್ಯದಲ್ಲೂ ಸರ್ಕಾರಕ್ಕೆ ಬದ್ಧರಾದ ಯಾವ ಜನರಲ್‌ಗಳೂ ಇರಲಿಲ್ಲ (ಇದ್ದ ಕೆಲವರನ್ನು ಬೆಳಿಗ್ಗೆಯೇ ಬಂಧಿಸಿ ಕೊಲ್ಲಲಾಗಿತ್ತು) ಪ್ರಜಾಸತ್ತಾತ್ಮಕ ಸರ್ಕಾರದ ಬೆಂಬಲಿಗರು ಯಾವುದೇ ಪ್ರತಿರೋಧ ಒಡ್ಡಲು ಸಾಧ್ಯವಾಗಲಿಲ್ಲ.

ಆ ದಿನಗಳ ಭಯಾನಕ ವಾತಾವರಣ ನೆನಪಿಸಿಕೊಂಡರೆ ನನಗೆ ಈಗಲೂ ಜುಮ್ಮೆನಿಸುತ್ತದೆ. ಜನರಲ್ ಪಿನೋಶೆ ಮತ್ತು ಇತರ ಜನರಲ್‌ಗಳ ಕ್ರೌರ್ಯ ನನ್ನ ಕಲ್ಪನೆಗೂ ಮೀರಿದ್ದಾಗಿತ್ತು. ಕ್ರೌರ್ಯ, ನಾಶ, ನೀಚತನ ಮೈವೆತ್ತಂತೆ ಇದ್ದ ಜನರಲ್ ಪಿನೋಶೆ. ನಾಜಿಗಳ ನಂತರ ಪಿನೋಶೆ ಸರ್ಕಾರವೇ ಸಾರ್ವಜನಿಕವಾಗಿ ಪುಸ್ತಕಗಳನ್ನು ಸುಟ್ಟಿದ್ದು. ನನ್ನ ಪುಸ್ತಕಗಳನ್ನೂ ಸುಡಲಾಗಿತ್ತು.

ನಾನು ಬ್ರಿಟನ್‌ಗೆ ಹಿಂದಿರುಗಿದ ಮೇಲೆ ಚಿಲಿಯನ್ ಸೌಹಾರ್ದತಾ ಸಂಸ್ಥೆ ಜತೆ ಕೆಲಸಮಾಡಿದೆ. ಆ ದಿನಗಳಲ್ಲಿ ಚಿಲಿಯಲ್ಲಿ ನಡೆದ ಹಿಂಸಾಕಾಂಡದ ಹಿನ್ನೆಲೆಯಲ್ಲಿ ನಮ್ಮ ಕೆಲಸಕ್ಕೆ ಭಾರಿ ಬೆಂಬಲ ದೊರಕಿತ್ತು. ಅಲೆಂದೆಯ ಚಿಲಿ ಜಗತ್ತಿನ ಎಲ್ಲೆಡೆಯಂತೆ ಬ್ರಿಟನ್‌ನಲ್ಲೂ ಹೆಚ್ಚಿನ ಸಾಮಾಜಿಕ ನ್ಯಾಯದ ಸಮಾಜ ನಿರ್ಮಾಣಕ್ಕೆ ನಡೆದ ಆಶಾದಾಯಕ ಪ್ರಯತ್ನದ ಪ್ರತೀಕವಾಗಿ ಎಲ್ಲರಲ್ಲೂ ಆಶಾಕಿರಣ ತಂದಿತ್ತು. ಅದನ್ನು ಹೊಸಕಿ ಹಾಕಿದ ನಗ್ನ ಶಕ್ತಿ, ಸ್ವಾರ್ಥ ಐಶ್ವರ್ಯದ ಕರಾಳ ಶಕ್ತಿಗಳ ಬಗ್ಗೆ ಅಷ್ಟೇ ರೋಷವಿತ್ತು.

ಲಂಡನ್‌ನಲ್ಲಿ ಜನರಲ್ ಪಿನೋಶೆ ಬಂಧನ ನನಗೆ ಭಾರಿ ಭಾರಿ ಖುಶಿತಂದಿತ್ತು. 1973 ರಿಂದ ಆತ ಚಿಲಿಯಲ್ಲಿ ನಡೆಸಿದ ಘೋರ ಅಪರಾಧದ ಬಗ್ಗೆ ಕಿಂಚಿತ್ತೂ ಶಿಕ್ಷೆಯಾಗದೆ ಆರಾಮಾಗಿ ಓಡಾಡುತ್ತಿದ್ದಾನೆ. ಆತನ ಮೇಲೆ ನನಗೆ ವೈಯಕ್ತಿಕ ದ್ವೇಷವಿಲ್ಲ. ಪ್ರಜಾಸತ್ತೆ ವಿರೋಧಿ ಸರ್ವಾಧಿಕಾರಿ ಶಕ್ತಿಗೆ ಬೆಂಬಲ ಕಾನೂನು ರಕ್ಷೆ ಮುಂದುವರೆಯುತ್ತಿರುವುದಕ್ಕೆ ಎಲ್ಲಿಂದಾದರೂ ಸವಾಲು ಬಂತಲ್ಲ ಅಂತ ಖುಶಿ.

ಈಗಿನ ಚಿಲಿಯನ್ ಸರ್ಕಾರ ಎಷ್ಟೇ ದೈನುದ್ದಾಗಿರಲಿ, ಮಿಲಿಟರಿ ಕ್ಷಿಪ್ರಕ್ರಾಂತಿ ಸತ್ಯ ಬಯಲಿಗೆ ಬಾರದೆ, ಆ ಹಿಂಸಾಕಾಂಡ ನಡೆಸಿದ್ದಕ್ಕೆ ಶಿಕ್ಷೆ ಆಗದೆ ಅವರ ಬಲಿಪಶುಗಳಿಗೆ ನ್ಯಾಯ ಸಿಗದೆ ಚಿಲಿ ಯಾಕೆ ಜಗತ್ತಿನ ಎಲ್ಲೂ ಜನಕ್ಕೆ ಭದ್ರತೆ ಇಲ್ಲ, ಪ್ರಜಾಪ್ರಭುತ್ವಕ್ಕೆ ರಕ್ಷಣೆ ಇಲ್ಲ.

ಏಜೆನ್ಸಿದಾರರಲ್ಲಿ ಮತ್ತೊಮ್ಮೆ ಮನವಿ

'ಐಕ್ಯರಂಗ' ಅತ್ಯುತ್ತಮ ಹಾಗೂ ಅತ್ಯುಪಯುಕ್ತ ರೀತಿಯಲ್ಲಿ ಪ್ರಕಟವಾಗುವಲ್ಲಿ ನಮ್ಮ ಮಾನ್ಯ ಏಜೆನ್ಸಿದಾರರ ಸಹಕಾರದ ಮಹತ್ವವನ್ನು ನಾವು ಮತ್ತೆ - ಮತ್ತೆ ನೆನಪಿಸುತ್ತಾ ಬಂದಿದ್ದೇವೆ. ಅಭೂತಪೂರ್ವ ಬೆಲೆಯೇರಿಕೆಯ ಈ ದಿನಗಳಲ್ಲಿ ಇದು ಇನ್ನಷ್ಟು ಮುಖ್ಯವಾಗಿದೆ. ಆದರೆ ದುರದೃಷ್ಟವಶಾತ್ ಕೆಲವು ಏಜೆನ್ಸಿದಾರರು ಪರಿಸ್ಥಿತಿಯ ಗಂಭೀರತೆಯನ್ನು ಇನ್ನೂ ಅರಿತುಕೊಂಡಂತಿಲ್ಲ. ಇಂತಹ ಏಜೆನ್ಸಿದಾರರು ಇನ್ನು ಒಂದು ತಿಂಗಳೊಳಗೆ ತಮ್ಮ ಬಾಕಿಯನ್ನು ಚುಕ್ತಾ ಮಾಡದಿದ್ದರೆ ಅವರಿಗೆ ಜನವರಿ 1999 ರಿಂದ ಪತ್ರಿಕೆಯನ್ನು ನಿಲ್ಲಿಸದೆ ನಿರ್ವಾಹವಿಲ್ಲವಾಗಿದೆ. ಸಂಬಂಧಪಟ್ಟ ಏಜೆನ್ಸಿದಾರರಿಗೆ ಈ ಬಗ್ಗೆ ಪ್ರತ್ಯೇಕವಾಗಿ ಪತ್ರಗಳನ್ನು ಈಗಾಗಲೇ ಕಳಿಸಲಾಗಿದೆ. ಇತರರು ತಮ್ಮ ಬಾಕಿಯನ್ನು ಫೆಬ್ರವರಿ ಅಂತ್ಯದೊಳಗೆ ಕನಿಷ್ಠ ಮೂರು ತಿಂಗಳ ಮಟ್ಟಕ್ಕೆ ಇಳಿಸಬೇಕು. ಎಂದೂ ಕೇಳಿಕೊಳ್ಳುತ್ತೇವೆ. ದುಡಿಯುವ ಜನರ ಈ ಪತ್ರಿಕೆಯ ಪ್ರಕಟಣೆಯಲ್ಲಿ ಸಂಪೂರ್ಣ ಸಹಕಾರ ನೀಡಬೇಕೆಂದು ಮತ್ತೊಮ್ಮೆ ಏಜೆನ್ಸಿದಾರರಲ್ಲಿ ವಿನಂತಿಸಿಕೊಳ್ಳುತ್ತೇವೆ.

- ಐಕ್ಯರಂಗ

ಬೀದಿಗಿಳಿದ ಬಿಪಿಎಲ್ ಬಾಲೆಯರು



ಬ್ರಿಟಿಷ್ ಫಿಸಿಕಲ್ ಲ್ಯಾಬೋರೇಟರಿಸ್(ಬಿಪಿಎಲ್)ಗೆ ಭಾರತದ ಎಲೆಕ್ಟ್ರಾನಿಕ್ ಸಂಸ್ಥೆಗಳಲ್ಲಿ ಒಂದು ಪ್ರತಿಷ್ಠಿತ ಸ್ಥಾನ. ಶೇ.90 ಪಾಲು ಮಹಿಳೆಯರೇ ಇರುವ 8 ಸಾವಿರ ಕಾರ್ಮಿಕರು ದುಡಿಯುತ್ತಿರುವ ಒಂದು ರಾಷ್ಟ್ರೀಯ ಕಂಪನಿ.

ಬಿಪಿಎಲ್ ಎಂದಾಕ್ಷಣ ನಂಬರ್ 1 ಎಂಬ ಅನಿಸಿಕೆ ಟಿ.ವಿ., ವಾಷಿಂಗ್ ಮೆಷಿನ್, ರೆಫ್ರಿಜರೇಟರ್‌ಗಳು, ಟೇಪ್‌ರೆಕಾರ್ಡರುಗಳು, ಕಂಪ್ಯೂಟರ್ ಮಾನಿಟರ್‌ಗಳು, ರಿಮೋಟ್ ಕಂಟ್ರೋಲರ್‌ಗಳು, ಅಡಿಗೆ ಅನಿಲದ ಒಲೆಗಳು, ಆಲ್‌ಕ್ಲೈನ್ ಬ್ಯಾಟರಿಗಳ ಉತ್ಪಾದನೆಯಲ್ಲಿ ನಂ ಒನ್ ಕಂಪನಿಯಾಗಲು ಈ ಗ್ರೂಪ್ ಸಂಸ್ಥೆಯಲ್ಲಿ 37 ವರ್ಷಗಳಿಂದ ದುಡಿಯುತ್ತಿರುವ ನಿಷ್ಠಾವಂತ ಕಾರ್ಮಿಕರ ಶ್ರಮದ್ದು ದೊಡ್ಡ ಪಾಲು . ಇಂತಹ ನಂ. ಒನ್ ಕಂಪನಿಯ ಮಹಿಳಾ ಕಾರ್ಮಿಕರು ಕಳೆದ ಮೂವತ್ತೇಳು ವರ್ಷಗಳ ಮೂಕ ವೇದನೆಯಿಂದ ಹೊರಧುಮುಕಿ ಆಡಳಿತ ವರ್ಗದ ಅನ್ಯಾಯ, ದಬ್ಬಾಳಿಕೆ ಶೋಷಣೆ ಮತ್ತು ಒಳಕಿರುಕುಳದ ವಿರುದ್ಧ ಧ್ವನಿ ಎತ್ತಿ ಕಳೆದ ನವೆಂಬರ್ 19 ರಿಂದ ಹೋರಾಟದ ಅಂಗಳದಲ್ಲಿ ಸೆಣಸುತ್ತಿದ್ದಾರೆ.

ಶೋಷಣೆಯಲ್ಲಿಯೂ ನಂಬರ್ ಒನ್!

ದೇಶದ ಅರ್ಧ ಪಾಲು ಮಾರುಕಟ್ಟೆ ಕಬಳಿಸಿರುವ ಈ ನಂಬರ್ ಒನ್ ಕಂಪನಿ ಅಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರನ್ನು ಯಾವುದೇ ಕಾಯ್ದೆಗೆ ಸಿಗದಂತೆ ಶೋಷಣೆ ಮಾಡುತ್ತಿದೆ ಎಂಬುವುದು ಹೊರ ಜಗತ್ತಿಗೆ ಅಶ್ಚರ್ಯ ಎನ್ನಿಸಬಹುದು. ಆದರೆ ಕಾರ್ಮಿಕ ಮುಖಂಡರ ಅಭಿಪ್ರಾಯದಲ್ಲಿ ಇದು ಬಂಡವಾಳ ಪದ್ಧತಿಯ ಪ್ರಥಮ ಶ್ರೇಣಿ.

18 ರಿಂದ 20 ರ ಹರೆಯದ ಯುವಕ ಯುವತಿಯರನ್ನೇ ಎಸ್.ಎಸ್.ಎಲ್.ಸಿ. ಆಧಾರದಲ್ಲಿ 2 ವರ್ಷದ ಅವಧಿಗೆ ತರಬೇತಿ ಹೆಸರಲ್ಲಿ ನೇಮಕ. ಇಲ್ಲಿಂದಲೇ ಶೋಷಣೆ ಬೇರು ಬಿಡಲಾರಂಬಿಸುವುದು. ಕೆಲಸಕ್ಕೆಂದು ನೇಮಿಸಿಕೊಳ್ಳುವ ಅಭ್ಯರ್ಥಿಗಳು ಎಷ್ಟೇ ಓದಿರಲಿ ಪರಿಣಿತರಿರಲಿ ತರಬೇತಿ ಎಂದೇ ನೇಮಿಸಿಕೊಳ್ಳುತ್ತಾರೆ. ಈ ನೇಮಕವೇ ಅನ್ಯಾಯದ ಕೇಂದ್ರ ಬಿಂದು. ಈ 2 ವರ್ಷಕ್ಕೆ ಮತ್ತೆರಡು ವರ್ಷ ಸೇರಿಸಿ 3-4 ವರ್ಷ ಕಡಿಮೆ ಸಂಬಳದಲ್ಲಿ ದುಡಿಸಿ ಕೊಳ್ಳುವುದು ಈ ಕಂಪನಿಯ ಘನೋದ್ದೇಶ. ಅಷ್ಟರಲ್ಲಿ ಮದುವೆ ಮಾಡಿಕೊಂಡು ಕಡಿಮೆ ಸಂಬಳದ ಜೊತೆ ಕಿರುಕುಳ ತಾಳಲಾರದೆ ಸ್ವಯಂ ರಾಜಿನಾಮೆ ಪಡೆದು ಕಾರ್ಮಿಕ ಕಾನೂನಿನ ಪರಿಧಿಯು ಎಲ್ಲಾ ಸೌಲಭ್ಯಗಳಿಂದ ಕಾರ್ಮಿಕರನ್ನು ವಂಚಿಸಿ ಈ ಅಲ್ಪಾವಧಿಯಲ್ಲಿ ಗರಿಷ್ಟ ಶ್ರಮ ಪಡೆದು ಮನೆಗಟ್ಟುವ ಬಿಪಿಎಲ್ ಗ್ರೂಪ್‌ನ ವಾರ್ಷಿಕ ವಹಿವಾಟು 3 ಸಾವಿರ ಕೋಟಿ ರೂ. ಆದಾಯ ತೆರಿಗೆ ಕಳೆದು 84 ಕೋಟಿ ರೂ.ಗೂ ಮೀರಿದೆ ಎಂದರೆ ಕಾರ್ಮಿಕರ ಬೆವರಿನ ಜೊತೆ ಎಷ್ಟು ರಕ್ತ ಹೀರಿರಬಹುದು ಊಹಿಸಿ- ಎಂಬ ಸಂಘದ ಅಧ್ಯಕ್ಷರಾದ ಆರ್ ಶ್ರೀನಿವಾಸ್ ಮಾತಿನಲ್ಲಿ ನೋವಿತ್ತು.

ರಾಜ್ಯದ ಕಾರ್ಮಿಕ ನಿಯಮಗಳನ್ನು ಗಾಳಿಗೆ ತೂರಿ, ಸರ್ಕಾರಿ ಮೇಲಧಿಕಾರಿಗಳನ್ನು ತನ್ನ ಜೇಬಿಗಿಳಿಸಿ ಕೊಂಡಿರುವ ಈ ಬಹುಕೋಟಿ ಆದಾಯವುಳ್ಳ ಈ ಕಂಪನಿಯ 35 ವರ್ಷ ಮೇಲ್ಪಟ್ಟು ಬಹುತೇಕ ಎಲ್ಲ ಕಾರ್ಮಿಕರು ರಾಜಿನಾಮೆ ನಿಡುವುದೆಂದರೆ ಅದೊಂದು ಸ್ವಯಂ ನಿವೃತ್ತಿಯಲ್ಲವೇ ಅಲ್ಲ. 20 ವರ್ಷ ಸೇವೆಸಲ್ಲಿಸಿದರೂ ಗರಿಷ್ಟ 4 ಸಾವಿರ ವೇತನವಷ್ಟೆ.

ಬ್ರಿಟಿಷ್ ಆಡಳಿತದ ಅನುಭವ!

ತರಬೇತಿ ಅವಧಿಗೂ ಮೀರಿ ಯಾರಾದರು ಕೆಲಸ ಮುಂದುವರಿಸಿದರೆ ಪ್ರೋಬೇಷನರಿ ಪೀರಿಯಡ್ ಎಂಬ ನಾಮಕರಣ. ಈ ಅವಧಿಯಲ್ಲಿ ಆಡಳಿತ ವರ್ಗ ಹೇಳಿದಕ್ಕೆಲ್ಲ ತಲೆಯಾಡಿಸಬೇಕು. ಇಲ್ಲವೇ ಮೂಕ ಬಸವನಂತೆ ದುಡಿದು ಬವಣೆ ಪಡಬೇಕು. ಇಷ್ಟಕ್ಕೂ ಯಾರಾದರೂ ಪ್ರಶ್ನಿಸಿದರೆ ಸಂಜೆ ಬಾಗಿಲ ಬಳಿ ಪತ್ರ ಕೈ ಸೇರುತ್ತದೆ - 'ನಿಮ್ಮ ನಡತೆ ಚೆನ್ನಾಗಿಲ್ಲ ನಾಳೆಯಿಂದ ನೀವು ಕೆಲಸಕ್ಕೆ ಬರುವ ಅಗತ್ಯವಿಲ್ಲ' ಎಂಬ ಅಟ್ಟ ಹಾಸದ ನಗೆ ಚೆಲ್ಲಿ. ನಾಳಿನ ಭವಿಷ್ಯದ ಬಗ್ಗೆ ಆಶೆ ತುಂಬಿದ ಕಂಗಳ ಯುವತಿಯರು ಬಿಪಿಎಲ್ ಉದ್ಯೋಗವೆಂದರೆ ಪ್ರತಿಷ್ಠೆಯೆಂದು ಭಾವಿಸಿ ಕೆಲಸಕ್ಕೆ ಮುಗಿ ಬೀಳುವುದನ್ನೆ ಅಸ್ತ್ರವಾಗಿಸಿಕೊಂಡಿರುವ ಆಡಳಿತ ಮಂಡಳಿಯು ವಿಪರೀತ ಕೆಲಸದ ಒತ್ತಡದ ಮಧ್ಯೆಯೂ ದಿನಕ್ಕೆ 4 ಘಂಟೆ ಒವರ್ ಟೈಂ ಖಡ್ಡಾಯಗೊಳಿಸಿದೆ. (ತಿರಸ್ಕರಿಸುವ ಹಾಗಿಲ್ಲ. ಇದು ಇಲ್ಲಿನ ನಿಯಮ!) ಪಕ್ಕದವರ ಜೂತೆ ಮಾತನಾಡುವ ಹಾಗಿಲ್ಲ. ಮಧ್ಯೆ ನೀರು ಕುಡಿಯುವುದಾಗಲಿ ಮೂತ್ರ ವಿಸರ್ಜನೆಯಾಗಲಿ ಸಲ್ಲದು. ಇಲ್ಲಿ ಇಂಕ್ರಿಮೆಂಟ್ ಬದಲು ಧಿಡೀರ್ ವರ್ಗಾವಣೆ-ಉಸಿರು ಜೋರಾಗಿ ಬಿಡುವಂತಿಲ್ಲ. ಗರ್ಭಿಣಿ ಸ್ತ್ರೀಯರು ನಿಂತೆ ಕೆಲಸ ಮಾಡಬೇಕೆಂಬ ಆದೇಶ. ಒಟ್ಟಾರೆ ಒಬ್ಬ ಮಹಿಳಾ ಕಾರ್ಮಿಕರ ಅಭಿಪ್ರಾಯದಂತೆ 50 ವರ್ಷಗಳ ಹಿಂದಿನ ಬ್ರಿಟಿಷ್ ಆಳ್ವಿಕೆಯ ಅನುಭವ ಈ ಅಧುನಿಕ ಬಾಲೆಯರಿಗೆ.

ಜಪಾನ್ ಮಾದರಿ!

ಉತ್ಪಾದನೆ ಗುಣ ಮಟ್ಟ ಹೆಚ್ಚಿಸಿ ವಿದೇಶಿ ತಂತ್ರಜ್ಞಾನ ಪಡೆದು ವಿದೇಶದಲ್ಲಿ ವಿಶಾಲ ಮಾರುಕಟ್ಟೆ ಪಡೆಯಲು ಅಮೇರಿಕಾ, ಜಪಾನ್ ಮುಂತಾದ ರಾಷ್ಟ್ರಗಳ ಬೇರೆ ಕಂಪನಿಗಳಿಗೆ ಭೇಟಿ ನೀಡಿ ಬಂದ ಮೇಲಧಿಕಾರಿಗಳು ಕೆಲಸದ ನಡುವೆ ಮಾತನಾಡಬಾರದು, ಅತ್ತ ಇತ್ತ ತಿರುಗಬಾರದು, ನೀರು ಕುಡಿಯ ಬಾರದು ಮೂತ್ರ ವಿಸರ್ಜನೆ ಮಾಡಬಾರದು. ಇದೆಲ್ಲ ಊಟದ ಸಮಯದಲ್ಲೆ ನಡೆಯಬೇಕು. ಇದು ಜಪಾನ್ ಮಾದರಿ ಎಂಬ ನೀತಿ ಪಾಠ ಬೋಧಿಸುತ್ತಾರೆ. ಆದರೆ 30 ಮಹಿಳೆಯರಿಗಿಂತ ಹೆಚ್ಚಿದ್ದರೆ ಅವರ ಎಳೆ ಮಕ್ಕಳಿಗೆ ತೊಟ್ಟಿಲು, ವಿಶ್ರಾಂತಿ ಕೊಠಡಿ ಆಯಾಗಳಿರಬೇಕೆಂಬ ಸರ್ಕಾರಿ ನಿಯಮದ ಬಗ್ಗೆಯಾಗಲಿ, 500 ಕಾರ್ಮಿಕರಿಗಿಂತ ಹೆಚ್ಚಿದ್ದರೆ ಅಂಬುಲೆನ್ಸ್, ಒಳಗೆ ಪ್ರಥಮ ಚಿಕಿತ್ಸೆ ಕೇಂದ್ರವಿರಬೇಕೆಂಬ ಕಾರ್ಮಿಕ ಕಾಯ್ದೆ ಬಗ್ಗೆ ಇವರ ಚಕಾರವಿಲ್ಲ. ಇದು ಶೋಷಣೆಯ ಇನ್ನೊಂದು ಮಗ್ಗಲು ಎಂಬ ಕಾರ್ಮಿಕ ಮುಖಂಡರ ಮಾತಲ್ಲಿ ಸತ್ಯ ಅಡಗಿದೆ.

ಇಲ್ಲಿನ ಅಧಿಕಾರಿಗಳ ವೇತನ ಬೇರೆಲ್ಲಾ ಕಂಪನಿಗಿಂತ ಅಧಿಕ. ಕಂಪನಿಯ ಉಪಾಧ್ಯಕ್ಷರ ಸಂಬಳ ಲಕ್ಷ ರೂಗೂ ಮೀರಿದೆ.

ಫ್ಯಾಮಿಲಿ ಟ್ರಸ್ಟ್!

ಇದು ಕಾರ್ಮಿಕರಿಗೆ ಅನ್ವಯವಾಗುವುದಿಲ್ಲ. ಕರ್ನಾಟಕದ ಬೆಂಗಳೂರಿನ ಹಳೇ ಮದ್ರಾಸ್ ರಸ್ತೆ, ಬನ್ನೇರುಘಟ್ಟ ರಸ್ತೆ, ಬೊಮ್ಮ ಸಂದ್ರ, ಬಸವಪುರ, ವೈಟ್‌ಫೀಲ್ಡ್, ಕೆ.ಹೆಚ್ ವೃತ್ತ, ದೊಡ್ಡಬಳ್ಳಾಪುರ ಹಾಗೂ ಮಂಡ್ಯಜಿಲ್ಲೆಯ ಮದ್ದೂರು ಸೇರಿದಂತೆ ಕೇರಳದ ಪಾಲ್‌ಘಾಟ್ ಮತ್ತು ದೆಹಲಿಯ ಅಪ್ಟಾನ್ ಇಂಡಿಯಾ ಲಿಮಿಟೆಡ್ ಹೆಸರಿನ 16 ಘಟಕಗಳಲ್ಲಿ ಎಲೆಕ್ಟ್ರಾನಿಕ್ ಉತ್ಪಾದನೆ ಜೊತೆ ಕಟ್ಟಡ ನಿರ್ಮಾಣ ಹಾಗೂ ಹಣಕಾಸು ಒದಗಿಸುವ ವ್ಯವಹಾರವನ್ನು ನಡೆಸುತ್ತಿದೆ. ಬೆಂಗಳೂರು ಕೈಗಾರಿಕಾ ಪ್ರದೇಶ ಈ ಉತ್ಪಾದನಾ ಕೇಂದ್ರ.

ಕರ್ನಾಟಕದಲ್ಲೆ 1 ಸಾವಿರ ಎಕರೆ ಜಮೀನನ್ನು ಮುಖ್ಯಮಂತ್ರಿಗಳ ಅಪ್ತ ಕಾರ್ಯದರ್ಶಿ ಬಿ.ಎಸ್. ಪಾಟೀಲ್ ನಂತಹ ಭ್ರಷ್ಟ ಅಧಿಕಾರಿಗಳ ಚಿತಾವಣೆಯಿಂದ ಸುಲಭವಾಗಿ ಲಪಟಾಯಿಸಿರುವ ಕಂಪನಿ ಮಾಲಿಕ ಟಿ.ಪಿ.ಜಿ. ನಂಬಿಯಾರ್ ತನ್ನ ಕಂಪನಿಯ ಏಳ್ಗೆಗೆ ಶ್ರಮಿಸುತ್ತಿರುವ ಕಾರ್ಮಿಕರಿಗೆ ಯಾವುದೆ ಕನಿಷ್ಟ ವೇತನವನ್ನಾಗಲಿ, ಬೋನಸ್ ಆಗಲಿ, ಇಂಕ್ರಿಮೆಂಟ್ ಆಗಲಿ ಇಲ್ಲವೆ ನಿವೃತ್ತಿ ವೇತನವನ್ನು ನೀಡದೆ ಬಂದ ಆದಾಯವನ್ನು ತನ್ನ ಕುಟುಂಬದ ಸದಸ್ಯರೇ ಇರುವ ಫ್ಯಾಮಿಲಿ ಟ್ರಸ್ಟ್‌ಗೆ ವರ್ಗಾಯಿಸಿ ತೆರಿಗೆ ಕಟ್ಟದೆ ಸರ್ಕಾರವನ್ನು ವಂಚಿಸುತ್ತಿದ್ದಾನೆ ಎಂದು ಕಾರ್ಮಿಕರ ದೂರು.

ಇಂತಹ ಅನ್ಯಾಯ ಅಕ್ರಮ ಕಿರುಕುಳಗಳ ವಿರುದ್ಧ ಮಹಿಳಾ ಕಾರ್ಮಿಕರ ಹೋರಾಟವನ್ನು ಹತ್ತಿಕಲು ತನ್ನ ಹಣದ ಪ್ರಭಾವದಿಂದ ಪೋಲೀಸ್ ಬಳಸಿ ಗರ್ಭಿಣಿಯರೂ ಸೇರಿದಂತೆ ಕಾರ್ಮಿಕರ ಮೇಲೆ ಲಾಠಿ ಪ್ರಹಾರ ನಡೆಸಿ ಅಸ್ಪತ್ರೆ ಸೇರುವಂತೆ ಮಾಡಿ ಯಶಸ್ಸಿನ ಕನಸು ಕಾಣುತ್ತಿದ್ದಾನೆ. ಆದರೆ ಕೇರಳದ ಘಟಕದಲ್ಲಿ ಸಿಐಟಿಯು ನೇತೃತ್ವದ ಕಾರ್ಮಿಕ ಸಂಘಕ್ಕೆ ಮಾನ್ಯತೆ ನೀಡಿರುವ ಈ ನಂಬಿಯಾರ್ ಇಲ್ಲಿಯು ಆ ಕೆಂಬಾವುಟದ ಸಂಘಕ್ಕೆ ಮಾನ್ಯತೆ ನೀಡಬಾರದೇಕೆಂಬ ಸಾವಿರಾರು ಕಾರ್ಮಿಕರ ಒಗ್ಗಟ್ಟಿನ ಕೂಗಿಗೆ ಉತ್ತರಿಸ ಬೇಕಿದೆ.

ಜಿರಲೆ ಮುಖಾಂತರ ಹೋರಾಟ ಆರಂಭ!

ಕಳೆದ ಐದಾರು ತಿಂಗಳುಗಳಿಂದಲೇ ಸಂಘ ರಚಿಸಿ ಕೊಳ್ಳುವ ಮೂಲಕ ತಮ್ಮ ಹಕ್ಕುಗಳ ಪಡೆಯಲು ಸತತವಾಗಿ ಯತ್ನಿಸುತ್ತಿದ್ದ ಕಾರ್ಮಿಕರಿಗೆ ಈ ದೊಡ್ಡ ಕಂಪನಿಯ ಈ ಭಂಡ ಮಾಲೀಕನ ವಿರುದ್ಧ ಸೆಟೆದು ನಿಲ್ಲುವ ಸಂದರ್ಭ ಬೇಕಾಗಿತ್ತು.

ಹಳೇ ಮದ್ರಾಸ್ ರಸ್ತೆಯ ಘಟಕದಲ್ಲಿ ಕ್ಯಾಂಟಿನ್ ಊಟದಲ್ಲಿ ಜಿರಲೆ ಸಿಕ್ಕಾಗ ಕಾರ್ಮಿಕರೆಲ್ಲರೂ ಒಟ್ಟಾಗಿ ನಮ್ಮ ಊಟದಲ್ಲಿ ಜಿರಲೆ ಸಿಕ್ಕಿದೆ ದಯಮಾಡಿ ಶುಚಿಯಾಗಿರುವಂತೆ ಕ್ರಮ ವಹಿಸಿ ಎಂದು ಕೇಳಿದ್ದೇ ತಡ ಕ್ಯಾಂಟಿನ್ ಸೌಲಭ್ಯವನ್ನು ಆಡಳಿತ ಮಂಡಳಿ ರದ್ದುಗೊಳಿಸಿತು. ಇದರಿಂದ ಕ್ರೋಧಗೊಂಡ ಕಾರ್ಮಿಕರಿಗೆ ಮತ್ತೊಂದು ಕಾಲಾವಕಾಶ ದೊರೆಯಿತು.

ಬಿಪಿಎಲ್ ಅಂಗ ಸಂಸ್ಥೆಯಾದ ಸಾರಿಗೆ ವ್ಯವಸ್ಥೆ ಒದಗಿಸುವ ಒರಿಯಂಟ್ ಕಂಪನಿ ಚಾಲಕರನ್ನು ಅಕ್ಟೋಬರ್‌ನಲ್ಲಿ ವಿನಾ ಕಾರಣ ಕೆಲಸದಿಂದ ವಜಾ ಮಾಡಿದಾಗ ಇಡೀ ಬಿಪಿಎಲ್ ಕಂಪನಿ ಕಾರ್ಮಿಕರು ಕೆಲಸ ನಿಲ್ಲಿಸಿ ಆ ಕಾರ್ಮಿಕನಿಗೆ ಬೆಂಬಲಿಸಿದರು. ಇದರಿಂದ ಅಲುಗಾಡಿದ ಆಡಳಿತ ವರ್ಗ ಚಾಲಕನನ್ನು ಕೆಲಸಕ್ಕೆ ತೆಗೆದುಕೊಂಡಿದ್ದು ಅಲ್ಲದೆ ಕ್ಯಾಂಟಿನ್ ಸೌಲಭ್ಯ ಮತ್ತೆ ಆರಂಭಿಸಿತು. ತರಬೇತಿ ಅವಧಿಯ 600 ವೇತನವನ್ನು 1800 ರೂಗಳಿಗೆ ಏರಿಸಿ ಇದರಿಂದ ಕಾರ್ಮಿಕರು ಸಂಘ ಬಿಡುತ್ತಾರೆಂದು ಆಶಿಸಿ ಮುಖಂಡರು ಸೇರಿದಂತೆ ಹಲವರನ್ನು ಸಸ್ಪೆಂಡ್ ಮಾಡಿ 600 ಕಾರ್ಮಿಕರನ್ನು ವರ್ಗಾಯಿಸಿತು.

ನವೆಂಬರ್‌ನಲ್ಲಿ 145 ಚಾಲಕರನ್ನು ಮತ್ತೆ ಸಸ್ಪೆಂಡ್ ಮಾಡಿದಾಗ ಇಡೀ ಕಂಪನಿಗಳ ಕಾರ್ಮಿಕರು ಬಿಪಿಎಲ್ ಗ್ರೂಪ್ ಆಫ್ ಕಂಪನಿಗಳ ಸಂಘ ಸಿಐಟಿಯು ಅಡಿಯಲ್ಲಿ ಒಗ್ಗಟ್ಟಾಗಿ ಹೋರಾಟಕ್ಕೆ ಧುಮುಕಿದೆ.

ಸಂಘದೊಂದಿಗೆ ಒಳಗೋಗುವ ವಿಶ್ವಾಸ ಈ ಮಹಿಳಾ ಕಾರ್ಮಿಕರಿಗೆ

ಈ ಮಹಿಳಾ ಕಾರ್ಮಿಕರ ಪ್ರಮುಖ ಬೆಡಿಕೆಯೆಂದರೆ ವೇತನವಾಗಲಿ, ಕೆಲಸದ ಭದ್ರತೆಯಾಗಲಿ ಸೌಲಭ್ಯಗಳಾಗಲಿ ಅಲ್ಲ ಪ್ರಥಮವಾಗಿ ಸಂಘಕ್ಕೆ ಮಾನ್ಯತೆ ಪಡೆದು ಒಳಗೋಗುವುದಾಗಿದೆ.

ಹೋರಾಟದ ಹಲವು ಹಂತವಾಗಿ ಅಕ್ಟೋಬರ್‌ನಲ್ಲಿ 3 ಸಾವಿರ ಕಾರ್ಮಿಕರ ಸಮಾವೇಶ ನಡೆಸಿ, ಸಂಘ ವಿರೋಧಿ ಚಟುವಟಿಕೆ ಕೈ ಬಿಟ್ಟು ಸಂಘಕ್ಕೆ ಮಾನ್ಯತೆ ನೀಡಬೇಕು ಎಂಬ ನಿರ್ಣಯ ಸೇರಿದಂತೆ ಕೆಲಸದ ಭದ್ರತೆ, ಕಾರ್ಮಿ ಹಕ್ಕುಗಳ ರಕ್ಷಣೆಗೆ ಒತ್ತಾಯಿಸಿ ವಿಧಾನ ಸೌಧ ಚಲೋ, ಕಾರ್ಮಿಕ ಆಯುಕ್ತರ ಕಛೇರಿ ಮುತ್ತಿಗೆ, ಪೋಲಿಸ್ ಕಿರುಕುಳದ ವಿರುದ್ಧ ಪೋಲೀಸ್ ಕಮೀಷನ್ ಕಛೇರಿಯೆದುರು ಧರಣಿ ಹಾಗೂ ಕಾರ್ಖಾನೆ ಮುಂದೆ ಧರಣಿ ಸತ್ಯಾಗ್ರಹ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸಿ ಕೂಡಲೇ ಮಧ್ಯ ಪ್ರವೇಶಿಸುವಂತೆ ಒತ್ತಾಯಿಸಿದ್ದಾರೆ. ಹಳೇ ಮದ್ರಾಸ್ ರಸ್ತೆಯ ಕಾರ್ಖಾನೆ ಮುಂದೆ ಪೋಲೀಸ್ ವಿಧಿಸಿದ ನಿಷೇಧಾಜ್ಞೆಯನ್ನು ನ್ಯಾಯಾದೀಶ ವಿ. ಗೋಪಾಲ ಗೌಡರಿದ್ದ ಹೈ ಕೋರ್ಟಿನ ವಿಭಾಗೀಯ ಪೀಠ ತೆರವುಗೊಳಿಸುವಂತೆ ಆದೇಶವನ್ನು ನೀಡಿ ಕಾರ್ಮಿಕರ ಹಕ್ಕನ್ನು ಎತ್ತಿ ಹಿಡಿದಿದೆ. ಕಾರ್ಮಿಕರ ಪಾಲಕರು ಹೋರಾಟದ ಬೆಂಬಲಕ್ಕಿದ್ದಾರೆ.

ಕಲ್ಪನ, ವೀಣಾ, ರತ್ನ, ವಿರೇಶ್, ರಾಧ, ರೇವತಿ, ಭಾಗ್ಯ, ತಣ್‌ಮಣಿ, ದಿನೇಶ್, ಧರಣೇಶ್, ರಮೇಶ್, ಗಿರೀಶ್, ಸಂಪತ್, ರವಿ, ತಿಮ್ಮೇಗೌಡ, ಪ್ರಸಾದ್, ಶರತ್, ಮೊದಲಾದ ಮುಂದಾಳುಗಳು ಸಂಘದ ಅಧ್ಯಕ್ಷರಾದ ಆರ್. ಶ್ರೀನಿವಾಸ್ ಹಾಗೂ ಪ್ರಧಾನ ಕಾರ್ಯದರ್ಶಿ ಟಿ.ಕೆ.ಎಸ್. ಕುಟ್ಟಿ ಮಾರ್ಗದರ್ಶನದಲ್ಲಿ ಹೋರಾಟದ ಮುಂಚೂಣಿಯಲ್ಲಿದ್ದು ಇವರ ಹೋರಾಟಕ್ಕೆ ಬೆಂಬಲವಾಗಿ ನಗರದ ಹಲವು ಪ್ರಗತಿಪರ ಸಂಘಟನೆಗಳು ಕಾರ್ಮಿಕ ಸಂಘಗಳು ನಿಂತು ಸ್ಪೂರ್ತಿ ನೀಡಿವೆ.

ಬ್ರಿಟಿಷ್ ಕಂಪನಿಯೊಂದರಲ್ಲಿ ನೌಕರನಾಗಿದ್ದ ಕೇರಳದ ನಂಬಿಯಾರ್ ತನ್ನ ತವರಿನಲ್ಲಿ ಕಾರ್ಮಿಕ ವರ್ಗ ಜಾಗೃತವಾಗಿರುವುದರಿಂದ ಕರ್ನಾಟಕದ ಕೆಳಮಧ್ಯಮ ವರ್ಗದ ಮಹಿಳೆಯರು ತನ್ನ ಶೋಷಣೆ ವಿರುದ್ಧ ಬೀದಿಗಿಳಿದು ಧ್ವನಿ ಎತ್ತಲಾರರೆಂಬ ಆತನ ಅಹಂಗೆ ಪೆಟ್ಟುನೀಡಿ ಕರ್ನಾಟಕದ ಮಹಿಳಾ ಕಾರ್ಮಿಕರು ಜಾಗೃತ ಗೊಂಡು ತಮ್ಮ ಹಕ್ಕುಗಳ ರಕ್ಷಣೆಗೆ ದುಮುಕಿರುವ ಹೋರಾಟ ಅಂಗಳದಲ್ಲಿ ಜಯ ದೊರೆಯಲೆಂಬುದು ಐಕ್ಯರಂಗದ ಆಶಯ.

- ಜಯರಾಂ

ಡಿಸೆಂಬರ್ 11 ರ ಕಾರ್ಯಾಚರಣೆ - ಇನ್ನಷ್ಟು ಸುದ್ದಿಗಳು

ಕೋಲಾರ: ಕೇಂದ್ರ ಸರ್ಕಾರದ ಜನವಿರೋಧಿ ಆರ್ಥಿಕ ಧೋರಣೆಗಳ ವಿರುದ್ಧ ಡಿ.11 ರಂದು ಸಾಮೂಹಿಕ ಸಂಘಟನೆಗಳ ನೇತೃತ್ವದ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿ ನಡೆಯಿತು. ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಎಲ್ಲಾ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಿತ್ತು. ಕೇಂದ್ರ ಸರ್ಕಾರದ ಕಛೇರಿಗಳು -(ಎಲ್.ಐ.ಸಿ. ಅಂಚೆ, ಟೆಲಿಕಾಂ ಮತ್ತು ಎಲ್ಲಾ ಬ್ಯಾಂಕುಗಳು ಮುಚ್ಚಿದ್ದವು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಸಂಚರಿಸಿಲ್ಲದ ಕಾರಣ ಮುಷ್ಕರದ ಬಿಸಿ ಪ್ರಯಾಣಿಕರಿಗೂ ತಟ್ಟಿತ್ತು. ನೂರಾರು ಕಾರ್ಯಕರ್ತರು ನಗರದ ಪ್ರಮುಖ ರಸ್ತೆಗಳಲ್ಲಿ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತ ಮೆರವಣಿಗೆ ಹೊರಟು ನಂತರ ಬಸ್ ನಿಲ್ದಾಣ ಹಾಗೂ ಗಾಂದಿ ಪ್ರತಿಮೆಯ ಬಳಿ ರಸ್ತೆ ತಡೆ ಹಾಗೂ ಪ್ರತಿಭಟನೆ ಮಾಡಿದರು. ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ಬಿಡುಗಡೆ ಮಾಡಿದರು. ಈ ಮುಷ್ಕರದ ನೇತೃತ್ವವನ್ನು ಸಿಐಟಿಯು ನಾರಾಯಣ ಸ್ವಾಮಿ, ಕ.ಪ್ರಾ ರೈತ ಸಂಘದ ಹೋಳೂರ್ ಶಂಕರ್, ಎಸ್.ಎಫ್.ಐ.ನ ಕೆ.ಎಸ್. ನಾರಾಯಣ ಸ್ವಾಮಿ, ಟಿ.ವಿ ಲೋಕನಾಥ್, ವಿಜಿ, ಕೃಷ್ಣ, ವಿ.ನಾರಾಯಣ ಸ್ವಾಮಿ, ಎನ್. ನಾಗರಾಜ್, ಡಿ.ವೈ.ಫ್.ಐ.ನ ಸತೀಶ್, ಶಂಕರೇಗೌಡ, ಮುರಳಿಕೃಷ್ಣ ವಹಿಸಿದ್ದರು.

ಈ ಮುಷ್ಕರಕ್ಕೆ ನಾಗರಿಕರು ಸಂಪೂರ್ಣ ಸಹಕಾರ ನೀಡಿದರು.

ಮುಳಬಾಗಿಲಿನಲ್ಲಿ

ಮುಳಬಾಗಿಲಿನಲ್ಲಿ ಡಿ.11.ರ ಮುಷ್ಕರ ಸಾಮೂಹಿಕ ಸಂಘಟನೆಗಳ ಕರೆಯಂತೆ ಯಶಸ್ವಿಯಾಗಿ ನಡೆಯಿತು. ಪಟ್ಟಣದ ಎಲ್ಲಾ ಶಾಲಾ-ಕಾಲೇಜುಗಳು ಮೊದಲೆ ಮುಚ್ಚಿದ್ದವು. ಕೇಂದ್ರ ಸರ್ಕಾರದ ಕಛೇರಿಗಳು ಬ್ಯಾಂಕ್‌ಗಳು ಬಹುತೇಕ ಮುಚ್ಚಿದ್ದವು.

ಬೆಳಿಗ್ಗೆಯಿಂದ ಸುಮಾರು 3 ಗಂಟೆ ಕಾಲ ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಸಲಾಯಿತು. ಸುಮಾರು 3 ಕಿ.ಮೀ. ದೂರ ವಾಹನಗಳು ಸಾಲುಗಟ್ಟಿನಿಂತಿದ್ದವು. ನಂತರ ಸುಮಾರು 500 ವಿದ್ಯಾರ್ಥಿಗಳು ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಹೊರಟು ಬಸ್ ನಿಲ್ದಾಣದ ಬಳಿ ಮತ್ತೊಮ್ಮೆ ರಸ್ತೆ ತಡೆ ನಡೆಸಿದರು. ಈ ಮುಷ್ಕರದ ನೇತೃತ್ವವನ್ನು ಎಸ್.ಎಫ್.ಐ. ಮುಖಂಡರಾದ ಎ.ವಿ. ವೆಂಕಟರಾಮ್, ಎಂ. ಮುನಿಯಪ್ಪ, ವೆಂಕಟರೆಡ್ಡಿ, ಡಿ.ವೈ.ಎಫ್.ಐ. ರಾಮಚಂದ್ರ, ಕ.ಪ್ರಾ.ರೈತ ಸಂಘದ ಟಿ.ಎಸ್. ರಮೇಶ್, ಶಂಕರ್, ತಿಮ್ಮಯ್ಯ ವಹಿಸಿದ್ದರು.

ರಾಮದುರ್ಗ:- ಬೃಹತ್ ಮೆರವಣಿಗೆ ಮತ ಪ್ರದರ್ಶನ ಹಾಗೂ ಬಹಿರಂಗ ಸಭೆ ನಡೆದವು.

ಎಸ್.ಎಫ್. ಐ.ನ ನೇತೃತ್ವದಲ್ಲಿ ಭಾರೀ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಪಂಚಾಯತಿ ನೌಕರರು, ಬೀಡಿ ಕಾರ್ಮಿಕರು, ಅಂಗನವಾಡಿ ನೌಕರರು, ವಸತಿರಹಿತರ ಸಂಘದ ಕಾರ್ಯಕರ್ತರು, ಮಾರ್ಕ್ಸ್‌ವಾದಿ ಕಮ್ಯೂನಿಷ್ಟ ಪಕ್ಷದ ಕಾರ್ಯಕರ್ತರು ಹಾಗೂ ಹಿತೈಷಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪಟ್ಟಣದಲ್ಲಿ ಬೃಹತ್ ಮೆರವಣಿಗೆ ನಡೆಸಿದ ನಂತರ ಲೈಬ್ರರಿ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಕಾರ್ಯದರ್ಶಿ ವಿ.ಪಿ. ಕುಲಕರ್ಣಿ ಅವರು ಮಾತನಾಡಿದರು.

ಎಸ್.ಎಫ್.ಐ. ಮುಖಂಡ ಶ್ರೀ ಕೊಳ್ಳಿ ಮಾತನಾಡಿದರು.

ಸಿಪಿಐ (ಎಂ) ಸ್ಥಳೀಯ ಘಟಕದ ಕಾರ್ಯದರ್ಶಿ ಗೈಬು ಜೈನೆಖಾನ ಆರಂಭದಲ್ಲಿ ಸ್ವಾಗತಿಸಿದರು.

ದೊಡ್ಡಬಳ್ಳಾಪುರ:- ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ., ಡಿ.ವೈ.ಎಫ್.ಐ, ಕರ್ನಾಟಕ ಪ್ರಾಂತ ರೈತ ಸಂಘಟನೆಗಳ ನೇತೃತ್ವದಲ್ಲಿ ಮುಷ್ಕರ ನಡೆಸಲಾಯಿತು. ಸುಮಾರು 200 ಕ್ಕೂ ಹೆಚ್ಚು ಕಾರ್ಯಕರ್ತರು ಊರಿನ ಪ್ರಮುಖ ಬೀದಿಗಳಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯ ವಿರುದ್ಧ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುವ ನೀತಿಯ ವಿರುದ್ಧ, ವಿಮಾ ಸಂಸ್ಥೆಗಳಲ್ಲಿ ವಿದೇಶಿಯರಿಗೆ ಅವಕಾಶ ನೀಡುವುದನ್ನು ವಿರೋಧಿಸುವ, ರೈತರು ಬೆಳೆದ ಫಸಲಿಗೆ ನ್ಯಾಯ ಬೆಲೆ ನೀಡಬೇಕೆಂದು, ಶಿಕ್ಷಣ ಖಾಸಗೀಕರಣದ ನೀತಿ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನಡೆಸಿದರು. ಮುಷ್ಕರವನ್ನು ಬೆಂಬಲಿಸಿ ನಗರದಲ್ಲಿ ತರಕಾರಿ ಮಂಡಿ ವ್ಯಾಪಾರಸ್ಥರು, ಜವಳಿ ವರ್ತಕರು, ದಿನಸಿ ವರ್ತಕರು, ತಮ್ಮ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಬೆಂಬಲ ಸೂಚಿಸಿದರು. ದೊಡ್ಡಬಳ್ಳಾಪುರದ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದ ಹಲವಾರು ಕಾರ್ಖಾನೆಗಳ ಕಾರ್ಮಿಕರು ಸಹ ಕೆಲಸ ಬಹಿಷ್ಕರಿಸಿ ಮುಷ್ಕರದಲ್ಲಿ ಭಾಗವಹಿಸಿದರು.

ಪುಟ 7 ನೋಡಿ

ಕ್ರಿಯಾ ಪ್ರಕಾಶನ - ವಿಳಾಸ ಬದಲಾವಣೆ

ಕ್ರಿಯಾಪ್ರಕಾಶನವು ನಂ. 12, 18ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು -27 ಇಲ್ಲಿಗೆ ವರ್ಗಾವಾಗಿರುವುದರಿಂದ ಇನ್ನು ಮುಂದೆ ಯಾವುದೇ ರೀತಿಯ ಪತ್ರವ್ಯವಹಾರ, ಇನ್ನಿತರ ವ್ಯವಹಾರಗಳನ್ನು ಹಿಂದಿನ ವಿಳಾಸವಾದ ನಂ.9, ಶೋಭಾಲಾಡ್ಜ್ ಕಾಂಪ್ಲೆಕ್ಸ್, ಗಾಂಧಿನಗರ ವಿಳಾಸದೊಂದಿಗೆ ನಡೆಸಬಾರದೆಂದು ಕೋರಿಕೆ.

ವ್ಯವಸ್ಥಾಪಕರು

ದುಡಿಯುವ ಜನಗಳ ಆಂದೋಲನವನ್ನು ವಿಸ್ತಾರಗೊಳಿಸಬೇಕು, ಬಲಿಷ್ಟಗೊಳಿಸಬೇಕು

ಪುಟ 1 ರಿಂದ

ವಿಧಾನಸಭಾ ಚುನಾವಣೆಗಳು ಬಿಜೆಪಿಗೆ ತಿರಸ್ಕಾರ ಕಾಂಗ್ರೆಸ್‌ಗೆ ಪುರಸ್ಕಾರವಲ್ಲ

ರಾಜಸ್ಥಾನ - ಮಧ್ಯಪ್ರದೇಶ ಮತ್ತು ದಿಲ್ಲಿಯ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಕೇಂದ್ರದ ವಾಜಪೇಯಿ ಸರಕಾರದ ಧೋರಣೆ ಮತ್ತು ಕಾರ್ಯ ನಿರ್ವಹಣೆಗೆ ಜನಗಳ ನಿರ್ಣಾಯಕ ತಿರಸ್ಕಾರವನ್ನು ತೋರಿಸಿವೆ ಎಂದು ಕೇಂದ್ರ ಸಮಿತಿ ಗಮನಿಸಿದೆ. ತನ್ನ ಸರಕಾರಗಳಿದ್ದ ಎರಡೂ ರಾಜ್ಯಗಳಲ್ಲಿ ಹಾಗೂ ವಿರೋಧ ಪಕ್ಷವಾಗಿದ್ದಲ್ಲೂ ಅದು ಸೋತಿದೆ. ಈ ಮೂಲಕ ಬಿಜೆಪಿಯ ವಿರುದ್ಧ ಜನಾದೇಶವಿದು ಎಂಬ ವಾಸ್ತವತೆ ಎದ್ದು ಕಾಣುತ್ತದೆ. ಜನತೆ ಮುಖ್ಯವಾಗಿ ಬಿಜೆಪಿಯ ವಿರುದ್ಧ ಎರಡು ಕಾರಣ ಗಳಿಗಾಗಿ ಮತ ನೀಡಿದ್ದಾರೆ. ಮೊದಲನೆಯದಾಗಿ, ಬಿಜೆಪಿ ಸರಕಾರದ ಆರ್ಥಿಕ ಧೋರಣೆಗಳಿಂದಾಗಿ ಜೀವನಾವಶ್ಯಕ ವಸ್ತುಗಳ ತೀವ್ರ ಬೆಲೆಯೇರಿಕೆ ಮತ್ತು ಇತರ ಸಂಕಟಗಳು ಜನಗಳ ಮೇಲೆ ಬಂದವು. ಎರಡನೆಯದಾಗಿ, ಅತ್ಯಂತ ಅಸಹಿಷ್ಣುತೆ ಯಿಂದ ಹಿಂದುತ್ವ ಅಜೆಂಡಾವನ್ನು ಜಾರಿ ಮಾಡಲು ಶಿಕ್ಷಣ ವ್ಯವಸ್ಥೆಯ ಕೋಮುವಾದೀಕರಣ, ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಹಲ್ಲೆ ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಗಲಭೆ ಪ್ರಚೋದಿಸುವ ಪ್ರಯತ್ನಗಳಿಂದಾಗಿ ಬಹಳಷ್ಟು ಜನ ಅದರಿಂದ ದೂರಸರಿದಿದ್ದಾರೆ.

ಜನತೆಯ ತೀರ್ಪು ಬಿಜೆಪಿಗೆ ವ್ಯಕ್ತಪಡಿಸಿದ ತಿರಸ್ಕಾರವೇ ಹೊರತು ಕಾಂಗ್ರೆಸ್ ಪಕ್ಷ ಅನುಸರಿಸಿದ ಧೋರಣೆಗಳ ಅನುಮೋದನೆಯಲ್ಲ. ಜನಗಳು ದೂರಸರಿದದ್ದು ಬಹುಪಾಲು ಕೇಂದ್ರದಲ್ಲಿನ ಹಾಗೂ ರಾಜ್ಯಗಳಲ್ಲಿನ ಬಿಜೆಪಿ ನೇತೃತ್ವದ ಸರಕಾರಗಳು ಅನುಸರಿಸಿದ ಉದಾರೀಕರಣ ಹಾಗೂ ಖಾಸಗೀಕರಣದ ನೀತಿಗಳಿಂದಾಗಿ ಎಂಬುದನ್ನು ಗಮನಿಸಬೇಕು.

ತನ್ನ ಬಲಿಷ್ಠ ನೆಲೆಗಳಲ್ಲಿ ಬಿಜೆಪಿಯ ಸೋಲು ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟವನ್ನು ಗಣನೀಯವಾಗಿ ದುರ್ಬಲಗೊಳಿಸಿದೆ. ಈಗಾಗಲೇ ಎಂಟು ತಿಂಗಳೊಳಗೆ ಆಂತರಿಕ ಕಿತ್ತಾಟ ಹಾಗೂ ಮೈತ್ರಿ ಕೂಟದ ಪಾಲುದಾರರು ತಳೆಯುವ ಪರಸ್ಪರ-ವಿರುದ್ಧ ನಿಲುವುಗಳಿಂದಾಗಿ ಸರಕಾರದ ಪ್ರತಿಷ್ಠೆಗೆ ಗಂಭೀರ ಧಕ್ಕೆ ಬಂದಿದೆ. ಈ ಗಣನೀಯ ಸೋಲು ಆಂತರಿಕ ಸೆಳೆತಗಳನ್ನು ತೀವ್ರಗೊಳಿಸಿದೆ. ಇದರ ಪರಿಣಾಮ ಆಡಳಿತದ ಮೇಲೂ ಬೀಳುತ್ತಿದೆ.

ಆರ್ಥಿಕ ಡೋಲಾಯಮಾನವಾಗಿದೆ

ವಾಜಪೇಯಿ ಸರಕಾರ ರಾಜಕೀಯ ಕ್ರಮಬದ್ಧತೆಯನ್ನು ಕಳಕೊಂಡಿರುವುದರೊಂದಿಗೇ ಇನ್ನೊಂದೆಡೆ ಆರ್ಥಿಕ ಪರಿಸ್ಥಿತಿಯೂ ಕ್ರಮೇಣ ಹದಗೆಡುತ್ತಿದೆ. ಆರ್ಥಿಕ ಡೋಲಾಯ ಮಾನವಾಗಿದೆ. ಕೈಗಾರಿಕೆಗಳಲ್ಲಿ ಹಿಂಜರಿತ ಮುಂದುವರೆಯುತ್ತಿದೆ. ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಕಳೆದ ವರ್ಷ ಈ ಅವಧಿಯಲ್ಲಿ ಸಾಧಿಸಿದುದರ ಅರ್ಧಕ್ಕಿಂತಲೂ ಕಮ್ಮಿ. ವ್ಯಾಪಾರ ಕೊರತೆ ಈ ವರ್ಷಗಳಲ್ಲಿ ದ್ವಿಗುಣಗೊಂಡು 50 ಸಾವಿರ ಕೋಟಿ ರೂ. ಗಳಷ್ಟಾಗುವ ಸಂಭವವಿದೆ. ಇದು ಪಾವತಿ ಬಾಕಿ ಬಿಕ್ಕಟ್ಟಿಗೆ ಕಾರಣವಾಗಬಹುದು. ರಫ್ತು ಇಳಿಮುಖಗೊಳ್ಳುತ್ತಲೇ ಇದೆ. ಕೃಷಿಯಲ್ಲಿ ಸಾರ್ವಜನಿಕ ಹಣ ಹೂಡಿಕೆಯಿಲ್ಲದ್ದರಿಂದ ರೈತರಿಗೆ ಗಂಭೀರ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ.

ಜನತೆಯ ಜೀವನ ಪರಿಸ್ಥಿತಿಯ ಮೇಲೆ ಜೀವನಾಶ್ಯಕ ವಸ್ತುಗಳ ಸರ್ವತೋಮುಖ ಬೆಲೆಯೇರಿಕೆಗಳ ಮೂಲಕ ಅತ್ಯಂತ ಹೀನ ಧಾಳಿಗಳು ಮುಂದುವರಿಯುತ್ತಿವೆ. ಬಳಕೆದಾರ ಬೆಲೆ ಸೂಚ್ಯಂಕ ಏರುತ್ತಲೇ ಇದೆ, ವಿಶೇಷವಾಗಿ ಆಹಾರ ವಸ್ತುಗಳ ಬೆಲೆಗಳಲ್ಲಿ ವ್ಯಾಪಾರೀ ಪರ ಪಕ್ಷಪಾತ ಹಾಗೂ ಕಳ್ಳ ದಾಸ್ತಾನು ಹಾಗೂ ಲಾಭಕೋರತನವನ್ನು ತಡೆಯಲು ನಿರಾಕರಣೆ - ಇವು ವಾಜಪೇಯಿ ಸರಕಾರದ ಪ್ರಮುಖ ಲಕ್ಷಣಗಳಾಗಿವೆ.

ವಿದೇಶಿಯರಿಗೆ ನಾಚಿಕೆಯಿಲ್ಲದೆ ರಿಯಾಯಿತಿ

ಈ ಶೋಚನೀಯ ಸ್ಥಿತಿಯಲ್ಲಿ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳುವ ಬದಲು, ತನ್ನ ಆರ್ಥಿಕ ಧೋರಣೆಗಳನ್ನು ಬದಲಿಸುವ ಬದಲು ವಾಜಪೇಯಿ ಸರಕಾರ ಭಂಡತನದಿಂದ ಅದನ್ನೇ ಮುಂದುವರೆಸಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಹಾಗೂ ಬಹುರಾಷ್ಟ್ರೀಯ ಕಂಪನಿಗಳನ್ನು ಸಂತುಷ್ಟಗೊಳಿಸುವುದರಲ್ಲೇ ನಿರತವಾಗಿದೆ. 'ಸ್ವದೇಶಿ'ಯ ಮಾತುಗಳನ್ನೆಲ್ಲಾ ಕೈಬಿಟ್ಟಿದೆ.

ಕೇಂದ್ರ ಸಮಿತಿ ಸಂಸತ್ತಿನಲ್ಲಿ ಸರಕಾರ ಮಂಡಿಸಿದ ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆಯನ್ನು ಬಲವಾಗಿ ವಿರೋಧಿಸಿತು. ವಿದೇಶಿ ಹಣಕಾಸು ಕಂಪನಿಗಳು ವಿಮಾವಲಯವನ್ನು ಆಸೆಗಣ್ಣುಗಳಿಂದಲೇ ನೋಡುತ್ತಿದ್ದಾರೆ. ಈಗ ಎಲ್.ಐ.ಸಿ. ಮತ್ತು ಜಿ.ಐ.ಸಿ. ಕ್ರೋಢೀಕರಿಸುತ್ತಿರುವ ಬೃಹತ್ ಗಾತ್ರದ ಸಂಪನ್ಮೂಲವನ್ನು ಕೈವಶ ಮಾಡಿಕೊಳ್ಳುವುದು ಅವುಗಳ ಬಯಕೆ. ಅವರು ಈ ಸಂಪನ್ಮೂಲಗಳನ್ನು ತಮ್ಮದೇ ವಾಣಿಜ್ಯ ಹಿತಾಸಕ್ತಿಗಳಿಗೆ ಹಾಗೂ ಲಾಭಾಂಶವನ್ನು ತಮ್ಮ ದೇಶಗಳಿಗೆ ರವಾನೆ ಮಾಡಲು ಬಳಸುತ್ತವೆ. ವಿಮಾ ವ್ಯವಹಾರವನ್ನು ಪ್ರವೇಶಿಸುವ ಕಂಪನಿಗಳಲ್ಲಿ 40% ದವರೆಗೆ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡಿ ಬಿಜೆಪಿ ತಾನೇ ಜನಗಳಿಗೆ ನೀಡಿದ ವಚನವನ್ನು ಮುರಿದು ವಿಶ್ವಾಸಘಾತ ಮಾಡಿದೆ. ಜಸ್ವಂತ್ ಸಿಂಗ್ ಹಾಗೂ ಸ್ಟ್ರೋಬ್‌ಟಾಲ್ಬೋಟ್ ನಡುವೆ ನಡೆದ ಗುಪ್ತ ಮಾತುಕತೆಗಳಲ್ಲಿ ನಿರ್ಬಂಧಗಳಲ್ಲಿ ಸ್ವಲ್ಪ ಸಡಿಲಿಕೆ ಬರಬಹುದೆಂಬ ನಿರೀಕ್ಷೆಯಿಂದ ವಾಜಪೇಯಿ ಸರಕಾರ ನಾಚಿಕೆಯಿಲ್ಲದೆ ಈ ರಿಯಾಯ್ತಿ ನೀಡಿದೆ.

ವಿಮಾ ವಲಯವನ್ನು ತೆರೆಯುವ ಹಾಗೂ ಹಣಕಾಸು ವಲಯದ ಉದಾರೀಕರಣದ ಪ್ರಯತ್ನದ ವಿರುದ್ಧ ಹೋರಾಡಲು ಎಲ್ಲಾ ಜನ ವಿಭಾಗಗಳನ್ನು ಅಣಿನೆರೆಸಲು ಕೇಂದ್ರ ಸಮಿತಿ ನಿರ್ಧರಿಸಿತು. ಏಕೆಂದರೆ ಇದು ದಕ್ಷಿಣ ಪೂರ್ವ ಏಶ್ಯಾದ ದೇಶಗಳಲ್ಲಾದಂತೆ ಆರ್ಥಿಕಕ್ಕೆ ಭಾರೀ ಧಕ್ಕೆ ತರುತ್ತದೆ.

ವಾಜಪೇಯಿ ಸರಕಾರ ಲಾಭಕಾರಕ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಹಿಂಪಡೆತದ ಅಪಾಯಕಾರಿ ಧೋರಣೆಯನ್ನು ಜಾರಿಗೆ ತರುತ್ತಿದೆ. ಅದು ಇಂತಹ ಕಂಪನಿಗಳ ಶೇರುಗಳನ್ನು ವಿದೇಶಿ ಹಣಕಾಸು ಸಂಸ್ಥೆಗಳಿಗೆ ಹಾಗೂ ಬ್ಯಾಂಕುಗಳಿಗೆ ಅಗ್ಗ ದರದಲ್ಲಿ ಕೊಡುತ್ತಿದೆ. ಅವು ಮಾರುಕಟ್ಟೆಯಲ್ಲಿ ಪರಿಸ್ಥಿತಿ ಸುಧಾರಿಸಿದಾಗ ಆ ಶೇರುಗಳನ್ನು ಮಾರಿಕೆ ಲಾಭ ಮಾಡಿಕೊಳ್ಳುತ್ತವೆ. ಬಜೆಟ್ ಕೊರತಾ ಹೆಚ್ಚುತ್ತಲೇ ಇರುವ ಪರಿಸ್ಥಿತಿಯನ್ನು ಎದುರಿಸಲಾಗದ ವಾಜಪೇಯಿ ಸರಕಾರ ಕೊರತೆ ಮುಚ್ಚುವ ಹತಾಶ ಪ್ರಯತ್ನದ ಭಾಗವಾಗಿ ಈ ಸಾರ್ವಜನಿಕ ವಲಯದ ಘಟಕಗಳ ಆಸ್ತಿಗಳನ್ನು ಅಗ್ಗ ದರದಲ್ಲಿ ಮಾರ ಬಯಸುತ್ತಿದೆ. ನಾಗರಿಕ ವಿಮಾನಯಾನ ಮಂತ್ರಾಲಯ ಕೈಗೊಂಡಿರುವ ಇಂಡಿಯನ್ ಏರ್‌ಲೈನ್ಸ್ ಮತ್ತು ಏರ್‌ಇಂಡಿಯಾ ಆಡಳಿತ ಮಂಡಳಿಗಳನ್ನು ರದ್ದುಪಡಿಸುವ ಸ್ವೇಚ್ಛಾಚಾರಿ ಕ್ರಮ ಸಾರ್ವಜನಿಕ ವಲಯದ ಉದ್ದಿಮೆಗಳೊಂದಿಗೆ ಬಿಜೆಪಿ ಸರಕಾರ ಎಷ್ಟು ನಿರ್ಲಕ್ಷ್ಯದಿಂದ ವರ್ತಿಸುತ್ತಿದೆ ಎಂಬುದನ್ನು ತೋರಿಸುತ್ತದೆ.

ಸಾರ್ವಜನಿಕ ವಲಯವನ್ನು ಕಳಚಲು ಬಿಡಲಾಗದು. ಏಕೆಂದರೆ ಅದರಿಂದ ಒಂದು ಸ್ವಾವಲಂಬೀ ಆರ್ಥಿಕದ ಬೆಳವಣಿಗೆಯ ಆಧಾರವನ್ನೇ ತಲೆಕೆಳಗು ಮಾಡುತ್ತದೆ.

ಬಿಜೆಪಿ ನೇತೃತ್ವದ ಸರಕಾರ ಭಾರತೀಯ ಪೇಟೆಂಟ್ ಕಾನೂನನ್ನು ತಿದ್ದುಪಡಿ ಮಾಡಿ ವಿದೇಶಿ ಕಂಪನಿಗಳಿಗೆ ವಿಶಿಷ್ಟ ಮಾರಾಟ ಹಕ್ಕುಗಳನ್ನು ಒದಗಿಸುವ ಹಾಗೂ ಉತ್ಪಾದನಾ ಪೇಟೆಂಟುಗಳಿಗೆ ಅವಕಾಶ ಕೊಡುವ ಶಾಸನ ತಂದಿರುವುದರ ಬಗ್ಗೆ ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿದೆ.

ಕಾಂಗ್ರೆಸ್‌ನ ತಪ್ಪು ನಿಲುವು

ಬಹುರಾಷ್ಟ್ರೀಯ ಕಂಪನಿಗಳ ಒತ್ತಡದಿಂದಾಗಿ ಈ ಮಸೂದೆ ತರಲು ಸರಕಾರ ತರಾತುರಿ ತೋರಿಸಿದೆ. ಪೇಟೆಂಟ್ ಕಾನೂನಿಗೆ ತಿದ್ದುಪಡಿ ಕೃಷಿ ವಲಯ ಮತ್ತು ಸಾರ್ವಜನಿಕ ಆರೋಗ್ಯ ವಲಯದ ಮೇಲೆ ಗಂಭೀರ ದುಷ್ಪರಿಣಾಮ ಬೀರಲಿದೆ. ಇವು ರಾಜ್ಯ ಸರಕಾರಗಳೊಂದಿಗೆ ಸಮಾಲೋಚನೆ ನಡೆಸದೆ ಅವುಗಳ ಪ್ರಧಾನ ಹಿತಾಸಕ್ತಿಗಳನ್ನು ಬದಿಗೊತ್ತಿ ಮಾರಿತಿನ್ನಲು ಕೇಂದ್ರ ಸರಕಾರಕ್ಕೆ ಯಾವುದೇ ಹಕ್ಕಿಲ್ಲ.

ಕಾಂಗ್ರೆಸ್ ಪಕ್ಷ ಪೂರ್ಣ ಬೆಂಬಲ ನೀಡಿ ಪೇಟೆಂಟ್ ಮಸೂದೆಯನ್ನು ಮಂಡಿಸಲು ಅವಕಾಶ ಮಾಡಿ ಕೊಟ್ಟಿತು. ಪೇಟೆಂಟ್ ತಿದ್ದುಪಡಿ ಮಸೂದೆ, ವಿಮಾ ಮಸೂದೆ ಹಾಗೂ ಬೇಕಾಬಿಟ್ಟಿಯಾದ ಉದಾರೀಕರಣಕ್ಕೆ ಬೆಂಬಲ ನೀಡುವುದನ್ನು ಮುಂದುವರೆಸಿದರೆ ಅದನ್ನೂ ಜನ ದೇಶಕ್ಕೆ ಮಾರಕವಾದ ನೀತಿಗಳೊಂದಿಗೆ ಗುರುತಿಸುತ್ತಾರೆ. ನರಸಿಂಹರಾವ್ ಸರಕಾರದ ಹೆಸರುಗೆಡಿಸಿದ್ದು ಈ ನೀತಿಗಳೇ.

ಅಮೆರಿಕನ್ ಒತ್ತಡಗಳಿಗೆ ಶರಣು

ಜಸ್ವಂತ್ ಸಿಂಗ್ ಮತ್ತು ಸ್ಟ್ರೋಬ್ ಟಾಲ್ಬೋಟ್ ನಡುವೆ ಏಳು ಸುತ್ತುಗಳ ಗುಪ್ತ ಮಾತುಕತೆಗಳ ನಂತರ ವಾಜಪೇಯಿ ಸರಕಾರ ಅಮೆರಿಕ ಸರ್ಕಾರ ಹಾಕಿದ ಶರತ್ತುಗಳನ್ನು ಈಡೇರಿಸಲು ಬಯಸುವ ದೀನ ಯಾಚಕನಂತಾಗಿಬಿಟ್ಟಿದೆ. ಪೋಖ್ರಾನ್ ಪರೀಕ್ಷಣೆಗಳ ನಂತರ ವಾಜಪೇಯಿ ಸರಕಾರ ಅಂತರ್ರಾಷ್ಟ್ರೀಯವಾಗಿ ತನ್ನನ್ನು ಏಕಾಂಗಿಯಾಗಿಸಿಕೊಳ್ಳುವಲ್ಲಿ ಯಶಸ್ವಿಯಾಯಿತಷ್ಟೇ. ಇದರಿಂದ ಅದು ಅಮೆರಿಕನ್ ಸಂಯುಕ್ತ ಸಂಸ್ಥಾನಗಳ ಒತ್ತಡಕ್ಕೆ ಹೆಚ್ಚೆಚ್ಚು ಬಲಿಯಾಗುವಂತಾಗಿದೆ. ಸರಕಾರ ಅಮೆರಿಕವನ್ನು ಸಂತುಷ್ಟಗೊಳಿಸಲು ಕ್ರಮಗಳನ್ನು ಕೈಗೊಂಡ ನಂತರವೂ 200 ಭಾರತೀಯ ಸಂಘಟನೆಗಳು ಹಾಗೂ ಕಂಪನಿಗಳನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಿದ ಅಮೆರಿಕಾದ ಕ್ರಮವನ್ನು ವಾಜಪೇಯಿ ಸರಕಾರ ದೃಢವಾಗಿ ಎದುರಿಸಲಿಲ್ಲ. ಸಿಟಿಬಿಟಿಗೆ ಸಹಿ ಮಾಡಿ ಭಾರತ ಒಂದು ಕನಿಷ್ಟ ಪರಮಾಣು ತಡೆ ಹೊಂದುವುದನ್ನು ಅಮೆರಿಕಾ ಒಪ್ಪುವಂತೆ ಮಾಡುವ ಪ್ರಯತ್ನ ಕೊನೆಗೆ ಅಮೆರಿಕನ್ ಒತ್ತಡಗಳಿಗೆ ತಲೆ ಬಾಗಿ ದಕ್ಷಿಣ ಏಶ್ಯಾ ಪ್ರದೇಶದಲ್ಲಿ ಅಮೆರಿಕಾಕ್ಕೆ ನ್ಯಾಯ ತೀರ್ಮಾನಗಾರನ ಸ್ಥಾನ ನೀಡುವ ಸ್ಥಿತಿ ತರುತ್ತಿದೆ. ಸಿಟಿಬಿಟಿಗೆ ಸಹಿ ಹಾಗೂ ಪರಮಾಣು ಶಸ್ತ್ರೀಕರಣದ ಧೋರಣೆ ಇವೆರಡಕ್ಕೂ ಸಿಪಿಐ(ಎಂ) ತನ್ನ ವಿರೋಧವನ್ನು ಪುನರುಚ್ಚರಿಸುತ್ತದೆ. ಏಕೆಂದರೆ ಇವೆರಡೂ ದೇಶಕ್ಕೆ ಮಾರಕವಾದ ಕ್ರಮಗಳು.


ರೋಮೇಶ್ ಶರ್ಮಾ ಹಗರಣ

ರೋಮೇಶ್ ಶರ್ಮಾ ಕ್ರಿಮಿನಲ್ ಚಟುವಟಿಕೆಗಳ ತನಿಖೆಯನ್ನು ತ್ವರಿತಗೊಳಿಸಬೇಕು ಎಂದು ಕೇಂದ್ರ ಸಮಿತಿ ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದೆ. ಕೆಲವು ಉನ್ನತ ರಾಜಕಾರಣಿಗಳೊಂದಿಗೆ ಹಾಗೂ ಮಾಫಿಯ ಗುಂಪುಗಳೊಂದಿಗೆ ಈ ವ್ಯಕ್ತಿಯ ಸಂಪರ್ಕ ಬಯಲಾಗಿದೆ. ಸಿಬಿಐ ತನಿಖೆ ಕ್ರಿಮಿನಲ್- ರಾಜಕಾರಣಿ ಶಾಮೀಲನ್ನು ಬಯಲಿಗೆಳೆಯಬೇಕು. ರೋಮೇಶ್ ಶರ್ಮಾರ ಹಾಗೂ ಆತನ ಕ್ರಿಮಿನಲ್ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವ ಎಲ್ಲಾ ರಾಜಕೀಯ ಮುಖಂಡರ ವಿರುದ್ಧ ದೃಢ ಕ್ರಮಗಳನ್ನು ಕೈಗೊಳ್ಳಬೇಕು.


ಪೂರ್ಣಿಯಾ ಹಲ್ಲೆಗಳ ಖಂಡನೆ

ಬಿಹಾರದ ಪೂರ್ಣಿಯಾ ಜಿಲ್ಲೆಯ ನಿಖರ್ಯಾಲ್ ಗ್ರಾಮದಲ್ಲಿ ಭೂಮಾಲಕ ಗ್ಯಾಂಗ್‌ಗಳು ಏಳು ಆದಿವಾಸಿಗಳ ಸಾಮೂಹಿಕ ಹತ್ಯಾಕಾಂಡ ನಡೆಸಿರುವುದನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ. ಸ್ಥಳೀಯ ಭೂಮಾಲಕ ಕಾನೂನು ಬಾಹಿರವಾಗಿ ಆಕ್ರಮಿಸಿದ್ದ ಜಮೀನಿನಲ್ಲಿ ಸಾಗುವಳಿ ನಡೆಸಲು ಭೂಹೀನ ಆದಿವಾಸಿ ಜನಗಳು ಹೋರಾಟ ನಡೆಸುತ್ತಿದ್ದರು. ಭೂಹೀನರ ಈ ಹಕ್ಕನ್ನು ದಮನ ಮಾಡಲು ನಡೆಸಿದ ಧಾಳಿಗಳಿಂದಾಗಿ ಗಲಭೆ, ಹತ್ಯೆಗಳು ನಡೆದಿವೆ. ಸುದ್ದಿ ತಿಳಿದ ಕೂಡಲೇ ಸಿಪಿಐ(ಎಂ) ಲೋಕಸಭಾ ಸದಸ್ಯರಾದ ಮೆಹಬೂಬ್ ಜೈದಿ ಹಾಗೂ ಸುಬ್ರತೋಮುಖರ್ಜಿ ಹಾಗೂ ಕೇಂದ್ರ ಸಮಿತಿ ಸದಸ್ಯ ಸುಭೋದ್ ರಾಯ್‌ರವರಿದ್ದ ತಂಡವೊಂದನ್ನು ಪೂರ್ಣಿಯಾಕ್ಕೆ ತಕ್ಷಣವೇ ಕಳಿಸಿದೆ. ಎಲ್ಲಾ ಅಪರಾಧಿಗಳನ್ನು ಬಂಧಿಸಲು ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸುತ್ತದೆ. ರಾಜ್ಯ ಸರಕಾರ ಈ ಧಾಳಿಗಳಿಗೆ ಬಲಿಯಾದ ಎಲ್ಲರಿಗೂ ಸಾಕಷ್ಟು ಪರಿಹಾರ ಹಾಗೂ ನೆರವು ಒದಗಿಸಬೇಕು.


ಹರ್ಕಿಷನ್ ಸಿಂಗ್ ಸುರ್ಜಿತ್


ಜ್ಯೋತಿಬಸು



ಇ.ಬಾಲಾನಂದನ್


ಇ.ಕೆ.ನಾಯನಾರ್


ವಿ.ಎಸ್.ಅಚ್ಯುತಾನಂದನ್



ಶೈಲೇನ್ ದಾಸ್ ಗುಪ್ತಾ



ಪ್ರಕಾಶ್ ಕಾರಟ್



ಎಸ್.ರಾಮಚಂದ್ರನ್ ಪಿಳ್ಳೆ



ಪಿ.ರಾಮಚಂದ್ರನ್


ಸೀತಾರಾಂ ಯೆಚೂರಿ



ಆರ್.ಉಮಾನಾಥ್


ಎಂ.ಹನುಮಂತರಾವ್


ಎಂ.ಕೆ.ಪಂಧೆ


ಬಿಮನ್ ಬಸು


ಅನಿಲ್ ಬಿಸ್ವಾಸ್


ಮಾಣಿಕ್ ಸರ್ಕಾರ್


ಪಿನರಾಯಿ ವಿಜಯನ್


ಹೊಸ ಪೊಲಿಟ್ ಬ್ಯೂರೋ

ಕೇಂದ್ರ ಸಮಿತಿ 17 ಸದಸ್ಯರುಗಳ ಪೊಲಿಟ್ ಬ್ಯೂರೋವನ್ನು ಆರಿಸಿತು. ಹಿಂದಿನ ಪೊಲಿಟ್‌ಬ್ಯೂರೋದಲ್ಲಿದ್ದ ಕಾಮ್ರೇಡ್ ಬಿನೋಯ್ ಕೃಷ್ಣ ಚೌಧರಿ ನಿವೃತ್ತರಾಗುತ್ತಿದ್ದಾರೆ. ಕಾಮ್ರೇಡ್ ಬಿನೋಯ್ ಚೌಧುರಿ ಪಕ್ಷದ ಹಿರಿಯ ಮುಖಂಡರು, ರೈತ ಆಂದೋಲನದ ಪ್ರಮುಖ ಮುಖಂಡರು. ಎಡರಂಗ ಸರ್ಕಾರದಲ್ಲಿ ಮಂತ್ರಿಯಾಗಿ ಅವರು ಪಶ್ಚಿಮ ಬಂಗಾಳದಲ್ಲಿ ಭೂ ಸುಧಾರಣೆಯನ್ನು ಜಾರಿ ಮಾಡಿದ ಶಿಲ್ಪಿಗಳಲ್ಲಿ ಒಬ್ಬರು. ಪೊಲಿಟ್ ಬ್ಯೂರೋದ ಸದಸ್ಯರಾಗಿ ಅವರು ಸಲ್ಲಿಸಿದ ಸೇವೆಯನ್ನು ಕೇಂದ್ರ ಸಮಿತಿ ಸ್ಮರಿಸಿಕೊಂಡಿತು. ಅವರು ಕೇಂದ್ರ ಸಮಿತಿಯ ಹಾಗೂ ಪಶ್ಚಿಮ ಬಂಗಾಳ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ ಇನ್ನು ಮುಂದೆಯೂ ಕಾಣಿಕೆ ನೀಡುತ್ತಾರೆ ಎಂದು ಕೇಂದ್ರ ಸಮಿತಿ ತಿಳಿಸಿದೆ.

ಐಕ್ಯರಂಗ

ಕರ್ನಾಟಕದ ಶ್ರಮಜೀವಿಗಳ ವಾರಪತ್ರಿಕೆ

1999



"ಇದುವರೆಗೆ ಇದ್ದ ಎಲ್ಲಾ ಸಮಾಜದ ಇತಿಹಾಸ ವರ್ಗ ಹೋರಾಟದ ಇತಿಹಾಸ" ಎಂಬ ವಾಕ್ಯದೊಂದಿಗೆ ಆರಂಭವಾಗಿ "ಆಳುವ ವರ್ಗಗಳು ಒಂದು ಕಮ್ಯುನಿಸ್ಟ್ ಮಾದರಿ ಕ್ರಾಂತಿಯಿಂದ ನಡುಗಲಿ. ಶ್ರಮಜೀವಿಗಳಿಗೆ ಕಳೆದುಕೊಳ್ಳಲು ಏನೂ ಇಲ್ಲ, ತಮ್ಮ ಸಂಕೋಲೆಗಳನ್ನಷ್ಟೆ. ಗೆಲ್ಲಲು ಜಗತ್ತೇ ಇದೆ. ಎಲ್ಲಾ ದೇಶಗಳ ದುಡಿಯುವ ಜನರೇ ಒಂದಾಗಿ" ಎಂದು ಕೊನೆಗೊಳ್ಳುವ ಕಮ್ಯುನಿಸ್ಟ್ ಪ್ರಣಾಳಿಕೆಯ ಈ ಘೋಷವಾಕ್ಯ ಕಳೆದ ಒಂದೂವರೆ ಶತಮಾನಗಳ ಕಾಲ ವಿಶ್ವಾದ್ಯಂತ ಸಮಾನತೆಯ ಸಮಾಜಕ್ಕಾಗಿ ಹೋರಾಡುತ್ತಿರುವ ಎಲ್ಲರ ಘೋಷವಾಕ್ಯ.



ಜನವರಿ

ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30	31											

15-ಸಂಕ್ರಾಂತಿ 20-ರಂಜಾನ್ 26-ಗಣರಾಜ್ಯೋತ್ಸವ

ಫೆಬ್ರವರಿ

ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28

14-ಮಹಾಶಿವರಾತ್ರಿ

ಮಾರ್ಚ್

ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30	31											

18-ಯುಗಾದಿ 29-ಮಹಾವೀರಜಯಂತಿ/ಬಕ್ರೀದ್

ಏಪ್ರಿಲ್

ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30												

2-ಗುಡ್‌ಫ್ರೈಡೇ 14-ಅಂಬೇಡ್ಕರ್ ಜಯಂತಿ 18 ಬಸವಜಯಂತಿ 27-ಮೊಹರಂ

ಮೇ

ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30	31											

1-ಕಾರ್ಮಿಕ ದಿನಾಚರಣೆ

ಜೂನ್

ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30												

27-ಈದ್ ಮಿಲಾದ್

ಜುಲೈ

ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30	31											

ಆಗಸ್ಟ್

ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30	31											

9-ಮಹಾಲಯ ಅಮಾವಾಸ್ಯೆ 15-ಸ್ವಾತಂತ್ರ್ಯ ದಿನ

ಸೆಪ್ಟೆಂಬರ್

ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30												

13-ವಿನಾಯಕ ವ್ರತ

ಅಕ್ಟೋಬರ್

ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30	31											

2-ಗಾಂಧಿ ಜಯಂತಿ 18-ಮಹಾನವಮಿ 19-ವಿಜಯ ದಶಮಿ

ನವೆಂಬರ್

ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30												

1-ರಾಜ್ಯೋತ್ಸವ 6-ನರಕ ಚತುರ್ದಶಿ 9-ಬಲಿಪಾಡ್ಯಮಿ

ಡಿಸೆಂಬರ್

ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu	ಬು We	ಗು Th	ಶು Fr	ಶ Sa	ಭಾ Su	ಸೋ Mo	ಮಂ Tu
1	2	3	4	5	6	7	8	9	10	11	12	13	14
15	16	17	18	19	20	21	22	23	24	25	26	27	28
29	30	31											

25-ಕ್ರಿಸ್‌ಮಸ್

ಜನವರಿ
1 (1959) ಕ್ಯೂಬಾ ಕ್ರಾಂತಿ
21 (1924) ಲೆನಿನ್ ನಿಧನ
26 (1950) ಭಾರತ ಗಣತಂತ್ರ ದಿನ
30 (1948) ಮಹಾತ್ಮ ಗಾಂಧೀಜಿ ಹತ್ಯೆ

ಮಾರ್ಚ್
5 (1953) ಸ್ಟಾಲಿನ್ ನಿಧನ
7 (1917) ಅಂತರ್ರಾಷ್ಟ್ರೀಯ ಮಹಿಳಾ ದಿನ
14 (1883) ಮಾರ್ಕ್ಸ್ ನಿಧನ
19 (1998) ಇ.ಎಂ.ಎಸ್. ನಿಧನ
22 (1977) ಎ.ಕೆ.ಜಿ. ನಿಧನ
23 (1931) ಭಗತ್ ಸಿಂಗ್ ಹುತಾತ್ಮ ದಿನ

ಏಪ್ರಿಲ್
6 (1990) ಬಿ.ಟಿ.ಆರ್. ನಿಧನ
12 (1992) ಬಸವಪುನ್ನಯ್ಯ ನಿಧನ
22 (1870) ಲೆನಿನ್ ಜನ್ಮದಿನ

ಮೇ
1 (1886) ಅಂತರ್ರಾಷ್ಟ್ರೀಯ ಕಾರ್ಮಿಕ ದಿನಾಚರಣೆ
5 (1818) ಮಾರ್ಕ್ಸ್ ಜನ್ಮದಿನ
19 (1985) ಪಿ.ಸುಂದರಯ್ಯ ನಿಧನ
19 (1890) ಹೋಚಿಮಿನ್ಹ್ ಜನ್ಮದಿನ
26 (1989) ಎಸ್.ಎಲ್.ಉಪಾಧ್ಯಾಯ ನಿಧನ

ಜೂನ್
14 (1928) ಚೆಗುವಾರಾ ಜನ್ಮ ದಿನ

ಆಗಸ್ಟ್
5 (1895) ಏಂಗೆಲ್ಸ್ ಜನ್ಮದಿನ
15 (1947) ಭಾರತ ಸ್ವಾತಂತ್ರ್ಯ ದಿನ

ಸೆಪ್ಟೆಂಬರ್
3 (1969) ಹೊಚಿಮಿನ್ಹ್ ನಿಧನ
9 (1976) ಮಾವೋ ನಿಧನ
18 (1998) ಪಿ.ರಾಮಚಂದ್ರ ರಾವ್ ನಿಧನ

ಅಕ್ಟೋಬರ್
1 (1949) ಚೀನಾ ಗಣತಂತ್ರ ದಿನ

ನವೆಂಬರ್
7 (1917) ಮಹಾನ್ ಅಕ್ಟೋಬರ್ ಕ್ರಾಂತಿ
24 (1820) ಏಂಗೆಲ್ಸ್ ಜನ್ಮದಿನ

ಡಿಸೆಂಬರ್
6 (1992) ಬಾಬ್ರಿ ಮಸೀದಿ ಧ್ವಂಸ
18 (1973) ಮುಝಫರ್ ಅಹ್ಮದ್ ನಿಧನ
21 (1876) ಸ್ಟಾಲಿನ್ ಜನ್ಮದಿನ
26 (1893) ಮಾವೋ ಜನ್ಮದಿನ

ಬಿಜೆಪಿ ಸೋಲಿನ ಪೋಸ್ಟ್ ಮಾರ್ಟಂ ವರದಿಗಳು.......

ಕಳೆದ ತಿಂಗಳು ವಿಧಾನಸಭೆ ಚುನಾವಣೆ ಗಳಲ್ಲಿ ಸೋತು ಹೈರಾಣಾಗಿರುವ ಪಕ್ಷ ಭಾರತೀಯ ಜನತಾ ಪಕ್ಷ. ಈಗ ಸೋಲಿನ ಪೋಸ್ಟ್ ಮಾರ್ಟಂ ನಡೆಯುತ್ತಿದೆ. ಪಕ್ಷದ ವೇದಿಕೆಗಳಲ್ಲಿ ನಾಯಕತ್ವ ತೀವ್ರ ಟೀಕೆ-ತರಾಟೆಗೆ ಒಳಗಾಗುತ್ತಿದೆ.

ಡಿಸೆಂಬರ್ 16-17 ರಂದು ಬಿಜೆಪಿ ಮಧ್ಯಪ್ರದೇಶ ರಾಜ್ಯ ಘಟಕದ ಸಭೆ ನಡೆಯಿತು. ಆತ್ಮವಿಶ್ವಾಸ ಕಳೆದುಕೊಂಡು ಸೊರಗಿರುವ ಕಾರ್ಯಕರ್ತರು ಪಕ್ಷದ ಸೋಲಿಗೆ ನಾಯಕರೇ ಹೊಣೆ ಎಂದು ಕೆಂಡ ಕಾರಿದರು.

ನಾಯಕರ ದೂರದೃಷ್ಟಿಯ ಕೊರತೆ ಹಾಗೂ ಕಾರ್ಯಕರ್ತರನ್ನು ಚುನಾವಣೆ ಕಾರ್ಯಕ್ಕಾಗಿ ಕಣಕ್ಕಿಳಿಸಲು ವಿಫಲವಾಗಿರುವುದು ಕಳಪೆ ಪ್ರದರ್ಶನಕ್ಕೆ ಕಾರಣವಾಯಿತು ಎಂದು ಸೋತ ಅನೇಕ ಬಿಜೆಪಿ ಅಭ್ಯರ್ಥಿ ಗಳು ಹೇಳಿದರು.

ಚುನಾವಣೆ ಹತ್ತಿರ ಹತ್ತಿರವಾಗುತ್ತಿದ್ದಂತೆ ಬಿಜೆಪಿ ಆತ್ಮತೃಪ್ತಿಯಿಂದ ಬೀಗುತ್ತಿದ್ದುದೂ ಸೋಲಿಗೆ ಕಾರಣವಾಯಿತು ಎಂದು ಒಬ್ಬ ಬಿಜೆಪಿ ಶಾಸಕ ಅಭಿಪ್ರಾಯ ಪಟ್ಟಿದ್ದಾರೆ.

ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಸೋತರೆ ತಾವು ಹತ್ತು ವರ್ಷ ರಾಜಕೀಯದಿಂದ ದೂರವಿರುವುದಾಗಿ ಮುಖ್ಯಮಂತ್ರಿ ದಿಗ್ವಿಜಯ್ ಸಿಂಗ್ ಮಾಡಿದ ಘೋಷಣೆಯನ್ನು ಬಿಜೆಪಿಯ ಹಿರಿಯ ನಾಯಕರು ಗಂಭೀರವಾಗಿ ಪರಿಗಣಿಸಲೇ ಇಲ್ಲ ಎಂಬುದು ಕಾರ್ಯಕರ್ತರ ಅಳಲು.

ಚುನಾವಣೆ ಬಗ್ಗೆ ಗಂಭೀರವಾಗಿ ಮಾತನಾಡುವ ಬದಲು ತಾವು ಮುಂದಿನ ಮುಖ್ಯಮಂತ್ರಿಯಾಗುವ ಲೆಕ್ಕಾಚಾರದಲ್ಲಿಯೇ ಹಲವು ಹಿರಿಯ ನಾಯಕರು ಮುಳುಗಿದ್ದರು. ಈ ರೀತಿಯ 'ಮಹಾತ್ವಾಕಾಂಕ್ಷೆ'ಯ ಆಧಾರದಲ್ಲಿಯೇ ಪಕ್ಷದ ಟಿಕೆಟ್ ಹಂಚಿಕೆ ಕೆಲಸ ನಡೆದಿತ್ತು ಎನ್ನುವುದು ಶಾಸಕರೊಬ್ಬರ ಹೇಳಿಕೆ.

ಇವುಗಳ ಪರಿಣಾಮವಾಗಿಯೇ ರಾಜ್ಯದಲ್ಲಿ ಬಿಜೆಪಿ ಪ್ರದರ್ಶನ ಕಳಪೆಯಾಯಿತು. ಮಾಜಿ ಮುಖ್ಯಮಂತ್ರಿ ಕೈಲಾಸ ಜೋಷಿ, ಹಿಂದಿನ ಅಸೆಂಬ್ಲಿಯ ಪ್ರತಿಪಕ್ಷ ನಾಯಕ ವಿಕ್ರಮ ವರ್ಮ ಮತ್ತು ಉಪಸ್ಪೀಕರ್ ಭೇರುಲಾಲ್ ಪತಿದರ್ ಮೊದಲಾದವರ ಪರಾಜಯದಲ್ಲಿ ಅದು ಪರಾಕಾಷ್ಠೆಯನ್ನು ಕಂಡಿತು ಎನ್ನುವುದು ಸ್ವತಃ ಬಿಜೆಪಿ ಮುಂದಿನ ವಿಶ್ಲೇಷಣೆ.

ಈರುಳ್ಳಿ ಪಾತ್ರ

ಈರುಳ್ಳಿ ಮತ್ತಿತರ ಅಗತ್ಯ ಸಾಮಗ್ರಿಗಳ ಬೆಲೆಗಳನ್ನು ತಡೆಯಲು ಅಥವಾ ಹಿಂದಿನ ಸ್ಥಿತಿಗೇ ಒಯ್ಯಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ವಿಫಲವಾಯಿತೆಂದು ಜನರ ಮನವೊಲಿಸುವಲ್ಲಿ ಕಾಂಗ್ರೆಸ್ ಯಶಸ್ವಿಯಾಯಿತು ಎಂದು ಬಿಜೆಪಿಯ ಭದ್ರಕೋಟೆ ಎನಿಸಿದ್ದ ಮಾಲ್ವಾ ಪ್ರದೇಶದಲ್ಲಿ ಸೋಲುಂಡ ಪಕ್ಷದ ಒಬ್ಬ ಅಭ್ಯರ್ಥಿ ಹೇಳುತ್ತಾರೆ.

ಈ ರೀತಿಯಾಗಿ ಮಧ್ಯಪ್ರದೇಶದಲ್ಲಿನ ಬಿಜೆಪಿ ಸೋಲಿಗೆ ಅದರ ಅಸಮರ್ಥತೆ, ವೈಫಲ್ಯತೆಗಳೇ ಕಾರಣ ಎಂಬುದು ಅದರಿಂದಲೇ ಸ್ಪಷ್ಟವಾದಂತಾಯಿತು.

ಜನಸಂಪರ್ಕದ ಕೊರತೆಯಿಂದ ನಷ್ಟ


ಇದು ಮಧ್ಯಪ್ರದೇಶದ ಕತೆಯಾದರೆ ರಾಜಸ್ಥಾನದ್ದು ಏನೆಂಬುದನ್ನು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರ ಬಾಯಿಯಿಂದಲೇ ಕೇಳಿ, ಓದಿ!

ಪಕ್ಷದ ಸಂಘಟನೆ ಜನಸಾಮಾನ್ಯರೊಂದಿಗೆ ಸಂಪರ್ಕ ಇಟ್ಟುಕೊಳ್ಳದಿದ್ದುದೇ ಬಿಜೆಪಿ ಸೋಲಿಗೆ ಕಾರಣವಾಯಿತು ಎಂದು ರಘುವೀರ ಸಿಂಗ್ ಕೌಶಲ್ ಹೇಳಿದ್ದಾರೆ.

ಆದರೆ ಪಕ್ಷವಾಗಲೀ, ಸರ್ಕಾರದ ಕಾರ್ಯನಿರ್ವಹಣೆಯಾಗಲೀ ಸೋಲಿಗೆ ಕಾರಣವಲ್ಲ ಎಂದು ಅದೇ ಉಸಿರಿನಲ್ಲಿ ಅವರು ಹೇಳಿದ್ದಾರೆ! ಇದು ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದು ಹೇಳಿದ ಜಟ್ಟಿಯ ಕತೆಯಾಗುತ್ತದೆಯೇ ಹೊರತು ವಾಸ್ತವವನ್ನು ಬಿಂಬಿಸುವುದಿಲ್ಲ.

ಸೋಲಿಗೆ ಬಹಳಷ್ಟು ಕಾರಣಗಳಿವೆ. ಬೆಲೆಯೇರಿಕೆ ಮತ್ತು ಬದಲಾವಣೆ ಬೇಕೆಂಬ ಜನರ ಬಯಕೆಯೂ ಅವುಗಳಲ್ಲಿ ಎರಡು ಕಾರಣಗಳು ಎಂದು ಕೌಶಲ್ ವಿವರಿಸುತ್ತಾರೆ!

ಬೆಲೆಯೇರಿಕೆ ಮತ್ತು ಕೇಂದ್ರದ ಸಮ್ಮಿಶ್ರ ಸರಕಾರದ ಮಿತ್ರ ಪಕ್ಷಗಳ ನಡುವಿನ ಕಚ್ಚಾಟದಿಂದಾಗಿ ಕೆಟ್ಟ ಹೆಸರು ಬಂದಿರುವುದೇ ಸೋಲಿಗೆ ಮುಖ್ಯ ಕಾರಣ ಎಂದು ಕೌಶಲ್ ಸುದ್ದಿಗೋಷ್ಠಿಯೊಂದರಲ್ಲಿ ಹೇಳಿದರು.



ಬಿಹಾರ ಬಿಜೆಪಿಯಲ್ಲಿ ಬಂಡಾಯ

ಶಿಸ್ತುಬದ್ಧ - ತತ್ವಬದ್ಧ ಪಕ್ಷ ಎಂಬ 'ಖ್ಯಾತಿ' ಗೆ ಒಳಗಾಗಿದ್ದ ಭಾರತೀಯ ಜನತಾ ಪಕ್ಷದ ಶಿಸ್ತುಬದ್ಧತೆ, ತತ್ವಬದ್ಧತೆಯ ಟೊಳ್ಳುತನ ಇದೀಗ ಕೆಲ ಸಮಯದಿಂದ ಬಯಲಿಗೆ ಬರುತ್ತಿದೆ. ಅಧಿಕಾರಕ್ಕಾಗಿ ಹಾಗೂ ಅಧಿಕಾರಕ್ಕೆ ಬಂದಮೇಲೆ ಅದನ್ನು ಉಳಿಸಿಕೊಳ್ಳಲು ಅದು ಮಾಡಿರುವ ಕಸರತ್ತುಗಳು ಜನರ ಮುಂದಿವೆ. ಇವೆರಡೂ ಅಂಶಗಳಲ್ಲದೆ ಪಕ್ಷದ ನಿಯಂತ್ರಣಕ್ಕಾಗಿಯೂ ಬಿಜೆಪಿಯಲ್ಲಿ ಕಚ್ಚಾಟ ನಡೆದಿದೆ. ಅಂಥ ಒಂದು ಪ್ರಕರಣ ಬಿಹಾರದಿಂದ ವರದಿಯಾಗಿದೆ.

ಬಿಜೆಪಿಯ ರಾಜ್ಯ ಹಾಗೂ ಕೇಂದ್ರ ನಾಯಕತ್ವದ ವಿರುದ್ಧ ಬಂಡೆದ್ದಿರುವ ಬಿಹಾರದ ಮೂವರು ಮುಖಂಡರನ್ನು ಪಕ್ಷದಿಂದ ವಜಾ ಮಾಡಲಾಗಿದೆ.

ಬಿಜೆಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ತಾರಾಕಾಂತ ಝಾ, ಮಾಜಿ ಸಂಸತ್ ಸದಸ್ಯ ಕಾಮೇಶ್ವರ ಪಾಸ್ವಾನ್ ಮತ್ತು ವಿಧಾನ ಪರಿಷತ್ ಸದಸ್ಯ ಯಶೋದಾನಂದ ಸಿಂಗ್ ಅಮಾನತಾಗಿರುವ ಮುಖಂಡರು.

ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಕುಶಭಾವು ಠಾಕ್ರೆ ಅವರ ನಿರ್ದೇಶನದ ಪ್ರಕಾರ ಪಕ್ಷದ ರಾಜ್ಯ ಅಧ್ಯಕ್ಷರು ಈ ಕ್ರಮವನ್ನು ಕೈಗೊಂಡಿದ್ದಾರೆ.

ಬಿಜೆಪಿಯ ಸಂಸತ್ ಸದಸ್ಯರಾದ ಲಾಲ್ ಮುನಿ ಚೌಬೆ ಮತ್ತು ಜನಾರ್ಧನ್ ಯಾದವ್ ಕೂಡಾ ಅಮಾನತುಗೊಳ್ಳುವ ಸಂಭವವಿದೆ.

ಪಕ್ಷದ ರಾಜ್ಯ ನಾಯಕತ್ವ ಮತ್ತು ಬಿಜೆಪಿಯ ಬಿಹಾರ ವ್ಯವಹಾರಗಳ ಉಸ್ತುವಾರಿ ಹೊಣೆ ಹೊಂದಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಗೋವಿಂದಾಚಾರ್ಯರ ವಿರುದ್ಧ ಹರಿಹಾಯ್ದುದಕ್ಕೆ ಈ ಮುಖಂಡರನ್ನು ಪಕ್ಷದಿಂದ ಅಮಾನತು ಮಾಡಿ ಷೋಕಾಸ್ ನೋಟಿಸ್ ನೀಡಲಾಗಿದೆ.

ಈಗ ಅಮಾನತು ಮಾಡಲಾಗಿರುವ ಮೂವರು ನಾಯಕರು ಪಕ್ಷದ ಪ್ರತಿಷ್ಠೆಗೆ ಧಕ್ಕೆ ತಂದಿದ್ದಾರೆ ಎಂದು ರಾಜ್ಯ ಘಟಕದ ಅಧ್ಯಕ್ಷರು ಹೇಳಿದ್ದಾರೆ. ಗೋವಿಂದಾಚಾರ್ಯರ ವಿರುದ್ಧ ಆಧಾರವಿಲ್ಲದ ಆರೋಪಗಳನ್ನು ಮಾಡಿದ್ದಾರೆ ಹಾಗೂ ತಾವೇ ಸ್ವಂತವಾಗಿ ಪರ್ಯಾಯ ಸಂಘಟನೆಯೊಂದನ್ನು ಹುಟ್ಟು ಹಾಕಿದ್ದಾರೆ ಎಂದು ಆಪಾದಿಸಿದ್ದಾರೆ.

ಅಸಲು ಗುಟ್ಟು

ಬಿಹಾರದ ಮೂವರು ಮುಖಂಡರ ಅಮಾನತು ಬಿಜೆಪಿಯ ಅಧಿಕಾರ ಕಚ್ಚಾಟಕ್ಕೆ ಹೊಸ ತಿರುವು ನೀಡಿದೆ. ಇದು ಮುರುಳಿ ಮನೋಹರ ಜೋಶಿ ಮತ್ತು ಎಲ್.ಕೆ. ಅಡ್ವಾಣಿ ಬಣಗಳ ನಡುವಿನ ತಾಕಲಾಟದ ಫಲವಾಗಿದೆ ಎನ್ನಲಾಗಿದೆ.

ಜೋಷಿ ಬಣದ ಬೆಂಬಲಿಗರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಅವರು ನೀಡುವ ಉತ್ತರ ಸಮರ್ಪಕವಾಗಿಲ್ಲದಿದ್ದರೆ ಅಥವಾ ಉತ್ತರ ನೀಡದಿದ್ದರೆ ಅವರನ್ನು ಪಕ್ಷದಿಂದಲೇ ವಜಾ ಮಾಡುವುದಾಗಿ ಅಡ್ವಾಣಿ ಬೆಂಬಲಿಗ ಬಣ ಎಚ್ಚರಿಕೆ ನೀಡಿದೆ.

ಮೇಲ್ಜಾತಿ ಭೂಮಿದಾರರು ಭೂರಹಿತ ಕೃಷಿ ಕಾರ್ಮಿಕರ ಶೋಷಣೆ ನಡೆಸುತ್ತಿದ್ದಾರೆ ಎಂಬ ವಿವರಣೆಯಿರುವ ಪುಸ್ತಿಕೆಯೊಂದು ಬಿಹಾರದಲ್ಲಿ ಪ್ರಕಟವಾಗಿದೆ. ಇದರ ಹಿಂದೆ ಗೋವಿಂದಾಚಾರ್ಯರ ಕೈವಾಡವಿದೆ ಎಂಬುದು ಭಿನ್ನಮತೀಯರ ಆಪಾದನೆಯಾಗಿದೆ.

ಗೋವಿಂದಾಚಾರ್ಯ ಮತ್ತು ರಾಜ್ಯ ವಿಧಾನಸಭೆಯ ಪ್ರತಿಪಕ್ಷ(ಬಿಜೆಪಿ) ಮುಖಂಡ ಸುಶೀಲ ಕುಮಾರ ಮೋದಿ ಪಕ್ಷದಲ್ಲಿ ಸಂವಿಧಾನೇತರ ವ್ಯಕ್ತಿಗಳಾಗಿ ವರ್ತಿಸುತ್ತಿದ್ದಾರೆ ಎಂಬುದೂ ಭಿನ್ನರ ಆರೋಪ.

ಕೋಮುಸೌಹಾರ್ದತೆ ದಿನಾಚರಣೆ

ಬಿಜಾಪುರ: ಡಿಸೆಂಬರ್ 6, 1992 ರಂದು ಕೋಮುವಾದಿಗಳು ಅಯೋಧ್ಯೆಯಲ್ಲಿಯ ಬಾಬ್ರಿ ಮಸೀದಿಯನ್ನ ನೆಲಸಮಗೊಳಿಸಿ ದೇಶದಲ್ಲಿ ಅಶಾಂತಿಗೆ, ಹಿಂಸಾಚಾರಕ್ಕೆ ನಾಂದಿ ಹಾಕಿದ್ದು ಅದೇ ಸ್ಥಳದಲ್ಲಿ ರಾಮಮಂದಿರ ಕಟ್ಟುವ ಹುನ್ನಾರ ನಡೆಸಿದ್ದನ್ನು ಖಂಡಿಸಿ ಆ ದಿನವನ್ನು ಕೋಮು ಸೌಹಾರ್ದತೆ ದಿನವನ್ನಾಗಿ ಆಚರಿಸಬೇಕೆಂಬ ಕರೆಯಂತೆ ಬಿಜಾಪುರದಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು ಜಂಟಿಯಾಗಿ ಗಾಂಧಿ ಚೌಕದಲ್ಲಿ ಮಾನವ ಸರಪಣಿ ರಚಿಸುವ ಮೂಲಕ ಹಿಂದುತ್ವವಾದಿಗಳು ಪ್ರಚೋದನೆಯನ್ನು ಖಂಡಿಸಿ ಕೋಮುಸೌಹಾರ್ದತೆಯನ್ನು ಉಳಿಸಿಕೊಳ್ಳುವ, ಅದನ್ನು ಸಶಕ್ತ ಗೊಳಿಸುವ ಪ್ರತಿಜ್ಞೆ ಕೈಗೊಂಡರು. ನಿವೃತ್ತ ಪ್ರಾಂಶುಪಾಲ ಎನ್.ವಿ.ತೊರಗಲ್ ಅವರು ಸಮಾರಂಭವನ್ನು ಉದ್ಘಾಟನೆ ಮಾಡಿದರು. ಅಂಕಲಗಿ ವಕೀಲರು ಹಿಂದೂ-ಮುಸ್ಲಿಂ ಐಕ್ಯತೆಯನ್ನು ಒತ್ತಿ ಹೇಳಿದರು. ಎನ್.ಕೆ. ಉಪಾಧ್ಯಾಯರು ಬಾಬ್ರಿ ಮಸೀದಿಯನ್ನು ನಾಶಗೊಳಿಸಿದ ಶಕ್ತಿಗಳೇ ಕೇಂದ್ರದಲ್ಲಿ ರಾಜ್ಯವಾಳುತ್ತಿದ್ದು, ಅತ್ಯಾವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ತಡೆಗಟ್ಟುವಲ್ಲಿ ವಿಫಲಗೊಂಡು ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಉದ್ದೇಶದಿಂದ ಕೋಮುವಾದದ ಬೆಂಕಿಯನ್ನು ಬಾಬಬುಡನ್ ಗಿರಿಯತ್ತ ಕೊಂಡೊಯ್ಯುವ ಪ್ರಯತ್ನವನ್ನು ಖಂಡಿಸಿ, ಆರ್.ಎಸ್.ಎಸ್, ಬಿಜೆಪಿ, ವಿಹೆಚ್‌ಪಿ, ಭಜರಂಗ ದಳಗಳಂಥ ಕೋಮು ಶಕ್ತಿಗಳನ್ನು ಸೋಲಿಸಲಿಕ್ಕೆ ಶ್ರಮಿಸಬೇಕೆಂದು ಕರೆಯಿತ್ತರು. ಎಲ್.ಕೆ.ಚಂಚಲಕರ ಅವರು ಕೋಮುವಾದಿಗಳ ಕುತಂತ್ರವನ್ನು ಬಯಲಿಗೆಳೆದರು. ಸಿಪಿಐ ಕಾರ್ಯದರ್ಶಿ ಶಿವರಾಜ ಬಿರಾದಾರ ಅವರು ಕೋಮು ಸೌಹಾರ್ದ ದಿನಾಚರಣೆಯ ಮಹತ್ವ ವಿವರಿಸಿದರು. ಮಹಿಳೆಯರು, ಪತ್ರಿಕಾಕರ್ತರನ್ನೊಳಗೊಂಡು ನೂರಾರು ಜನರು ಕೈಗೆ ಕೈಜೋಡಿಸಿ, ಕೋಮುವಾದಿಗಳಿಗೆ ಧಿಕ್ಕಾರವೆಂಬ ರಟ್ಟಿನ ಫಲಕಗಳನ್ನು ಎದೆಗೆ ಹಚ್ಚಿಕೊಂಡು ಘೋಷಣೆಕೂಗುತ್ತಾ ಮಾನವ ಸರಪಣಿ ನಿರ್ಮಿಸಿ ಗಾಂಧಿ ಚೌಕದಲ್ಲಿ ಪ್ರದರ್ಶನ ನಡೆಸಿ ನೆರೆದಿದ್ದ ನೂರಾರು ಜನರಿಗೆ ಕೋಮುವಾದದ ಅಪಾಯದ ಕುರಿತು ಎಚ್ಚರಿಕೆ ನೀಡಿ ಕೋಮು ಸೌಹಾರ್ದತೆ ಕಾಪಾಡುವ ಅವಶ್ಯಕತೆಯನ್ನು ತೋರಿಸಿಕೊಟ್ಟರು.

ಹಂಚಿನ ಕಾರ್ಮಿಕ ಸಂಘದ ಮಹಾಸಮ್ಮೇಳನ

ದಕ್ಷಿಣ ಕನ್ನಡ ಜಿಲ್ಲೆಯ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಹಂಚಿನ ಕಾರ್ಮಿಕರು ಸ್ವಾತಂತ್ರ್ಯ ಪೂರ್ವದಿಂದಲೂ ಮಹತ್ವರ ಪಾತ್ರವನ್ನು ವಹಿಸುತ್ತಾ ಬಂದಿದ್ದು ಇಂದಿನ ಮಹತ್ವಪೂರ್ಣ ಕಾಲಘಟ್ಟದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ದುಡಿಯುವ ಜನರ ಐಕ್ಯ ಚಳುವಳಿಗಳಲ್ಲಿ ಹಂಚಿನ ಕಾರ್ಮಿಕರು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕೆಂದು ಸಿಐಟಿಯು ದ.ಕ. ಮತ್ತು ಉಡುಪಿ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಸಿ. ನಂಜುಂಡಪ್ಪನವರು ಕರೆ ನೀಡಿದ್ದಾರೆ. ಅವರು ಡಿಸೆಂಬರ್ 6 ರಂದು ಮಂಗಳೂರಿನ ಬೋಳಾರದಲ್ಲಿ ಜರುಗಿದ ಎಸ್.ಕೆ. ಟೈಲ್ ವರ್ಕರ್ಸ್ ಯೂನಿಯನಿನ 54 ನೇ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಉಭಯ ಜಿಲ್ಲೆಗಳ ಸುಮಾರು 400 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಅಬ್ರಹಾಂ ಕರ್ಕಡರು ವಹಿಸಿದ್ದರು.

ಪ್ರಧಾನ ಕಾರ್ಯದರ್ಶಿ ಬಿ. ಮಾಧವನವರು ಮಂಡಿಸಿದ ವಾರ್ಷಿಕ ವರದಿ ಮತ್ತು ಕೋಶಾಧಿಕಾರಿ ಸಿ. ನಾರಾಯಣನವರು ಮಂಡಿಸಿದ ಗತವರ್ಷದ ಲೆಕ್ಕ ಪತ್ರಗಳ ಕುರಿತು ವಿವರವಾದ ಚರ್ಚೆ ನಡೆದು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಇ.ಎಸ್.ಐ. ಆಸ್ಪತ್ರೆಯಲ್ಲಿರುವ ಅವ್ಯವಸ್ಥೆಗಳ ಕುರಿತು ಗಂಭೀರ ಕಳವಳ ವ್ಯಕ್ತಪಡಿಸಿದ ಮಹಾಸಭೆಯು ಈ ಬಗ್ಗೆ ತುರ್ತು ಕ್ರಮಗಳನ್ನು ಕೈಗೊಳ್ಳಲು ಸರಕಾರವನ್ನು ಒತ್ತಾಯಿಸುವುದರೊಂದಿಗೇ, ಈಗಿನ ಅವ್ಯವಸ್ಥೆ ಮುಂದುವರಿದರೆ ತೀವ್ರ ಪ್ರತಿಭಟನಾ ಚಳುವಳಿಗಳನ್ನು ನಡೆಸಲು ತೀರ್ಮಾನಿಸಿತು. 1987 ರಿಂದೀಚೆಗೆ ಹಂಚಿನ ಕಾರ್ಮಿಕರ ಕನಿಷ್ಟ ಕೂಲಿಯನ್ನು ಪುನರ್ ವಿಮರ್ಶಿಸದಿರುವ ರಾಜ್ಯ ಸರಕಾರದ ಅಸಡ್ಡೆ ನೀತಿಯನ್ನು ಖಂಡಿಸಿದ ಸಭೆಯು, ಹಂಚಿನ ಕೈಗಾರಿಕೆಯಲ್ಲಿರುವ ಕೆಲಸದ ವಿಶಿಷ್ಟ ಪದ್ಧತಿಯನ್ನು ಗಮನದಲ್ಲಿರಿಸಿ ಸರಕಾರವು ಕಾರ್ಮಿಕ ಸಂಘದ ಪ್ರತಿನಿಧಿಗಳ ಜತೆಗೆ ಚರ್ಚಿಸಿ, ಕನಿಷ್ಟ ಕೂಲಿ ನಿಗದಿ ಪಡಿಸಿ ಪ್ರಕಟಿಸಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿತು.

ಡಿಸೆಂಬರ್ 11ರ ಮುಷ್ಕರವನ್ನು ಯಶಸ್ವಿಗೊಳಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ. ಆರ್. ಶ್ರೀಯಾನ್ ಅವರು ಕೇಂದ್ರ ಸರಕಾರದ ಆರ್ಥಿಕ ನೀತಿಗಳಿಂದಾಗಿ ಬೆಲೆ ಏರಿಕೆ ನಿರುದ್ಯೋಗ, ಕಾರ್ಖಾನೆಗಳ ಮುಚ್ಚುವಿಕೆ ಮೊದಲಾದ ಸಮಸ್ಯೆಗಳು ಉಲ್ಬಣಿಸುತ್ತಿವೆ ಎಂದು ವಿವರಿಸಿದರು. ಸರಕಾರವು ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಕೋಮುವಾದಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದೆ ಎಂದು ಎಚ್ಚರಿಸಿದ ಅವರು, ದುಡಿಯುವ ಜನರು ಸಂಘಟಿತ ಹೋರಾಟ ನಡೆಸುವ ಮೂಲಕ ಸರಕಾರದ ವಿನಾಶಕಾರಿ ನೀತಿಗಳನ್ನು ಸೋಲಿಸಬೇಕೆಂದು ಕರೆ ನೀಡಿದರು.

ಮುಂದಿನ ಅವಧಿಗೆ ಅಧ್ಯಕ್ಷರಾಗಿ ಅಬ್ರಹಾಂ ಕರ್ಕಡ, ಉಪಾಧ್ಯಕ್ಷರಾಗಿ ವಿ. ನರಸಿಂಹ, ಗಂಗಯ್ಯ ಅಮೀನ್ ಮತ್ತು ಬಾಲಕೃಷ್ಣ ಶೆಟ್ಟಿ, ಪ್ರಧಾನ ಕಾರ್ಯದರ್ಶಿಯಾಗಿ ಬಿ. ಮಾಧವ, ಜತೆ ಕಾರ್ಯದರ್ಶಿಗಳಾಗಿ ಕೆ. ಶಂಕರ್ ಮತ್ತು ಸುಕುಮಾರ್ ಹಾಗೂ ಕೋಶಾಧಿಕಾರಿಯಾಗಿ ಸಿ. ನಾರಾಯಣ ಅವರನ್ನು ಒಳಗೊಂಡು 43 ಮಂದಿಯ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಆರಂಭದಲ್ಲಿ ಸಂಘದ ಜತೆ ಕಾರ್ಯದರ್ಶಿ ಸುಕುಮಾರ್ ಸ್ವಾಗತಿಸಿದರು. ಇನ್ನೊಬ್ಬ ಜತೆ ಕಾರ್ಯದರ್ಶಿ ಕೆ. ಶಂಕರ್ ಅವರು ಕೊನೆಯಲ್ಲಿ ಧನ್ಯವಾದ ಅರ್ಪಿಸಿದರು.

ಬೀಡಿ ಕಾರ್ಮಿಕರ ಬೃಹತ್ ಪ್ರತಿಭಟನಾ ಪ್ರದರ್ಶನ

ವಾರಕ್ಕೆ ಆರು ದಿನಗಳ ಕೆಲಸ ಎಲ್ಲರಿಗೂ ಲೋಗ್ ಪುಸ್ತಕ, ಎಲೆ, ಎವರೇಜ್ ಹೆಸರಲ್ಲಿ ದಂಡ ವಸೂಲಿ ವಿರುದ್ಧ ಜಿಲ್ಲೆಯಾದ್ಯಂತ ಸಿಐಟಿಯು ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಬೃಹತ್ ಪ್ರದರ್ಶನ ನಡೆಸಿದರು.

ನವೆಂಬರ್ 20 ರಂದು ಸೌತ್ ಕೆನರಾ ಬೀಡಿ ವರ್ಕರ್ಸ್ ಪೆಡರೇಶನಿನ ನೇತೃತ್ವದಲ್ಲಿ ಬೀಡಿ ಕಾರ್ಮಿಕರ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಯಿತು. ಮಂಗಳೂರಿನ ತಾಲ್ಲೂಕು ವಿವಿಧ ಕಡೆಗಳಿಂದ ಬಂದ ಸಾವಿರಾರು ಮಹಿಳಾ ಕಾರ್ಮಿಕರು ಕದ್ರಿ ಭಾರತ್ ಬೀಡಿ ಡಿಪೋದಲ್ಲಿ ಪ್ರದರ್ಶನ ನಡೆಸಿ, ಮೇಲಿನ ಸಮಸ್ಯೆಗಳನ್ನು ಪರಿಹರಿಸುವಂತೆ ಮಾಲಿಕರಿಗೆ ಒತ್ತಾಯಿಸಿದರು. ಬೀಡಿ ಮಾಲಕರ ಪರವಾಗಿ ಭಾರತ್ ಬೀಡಿ ಪ್ರಧಾನ ಕಾರ್ಯದರ್ಶಿ ವಾಸುದೇವ ಪೈಯವರು ಶೀಘ್ರವೇ ಎಲ್ಲಾ ಮಾಲಿಕರ ಮತ್ತು ಕಾರ್ಮಿಕ ಪ್ರತಿನಿಧಿಗಳ ಸಭೆ ಕರೆದು, ಸಮಸ್ಯೆಗಳನ್ನು ಪರಿಹರಿಸುವ ಭರವಸೆ ನೀಡಿದರು. ಮಾಲಿಕರೊಂದಿಗಿನ ಚರ್ಚೆಯಲ್ಲಿ ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಸಿ. ನಂಜುಂಡಪ್ಪ, ಜಿಲ್ಲಾ ಬೀಡಿ ಪಡರೇಶನ್ನಿನ ಜಿಲ್ಲಾ ಅಧ್ಯಕ್ಷರಾದ ಕೆ. ಆರ್ ಶ್ರೀಯಾನ್, ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿ ಉಪಾದ್ಯಕ್ಷರಾದ ಯು.ಬಿ. ಲೋಕಯ್ಯ, ಬಾಬು ದೇವಾಡಿಗ, ಗಂಗಯ್ಯ ಅಮೀನ್, ಸದಾಶಿವಾದಾಸ್, ಜೆ.ವೀರಪ್ಪ, ಕೆ. ಮಂಜಪ್ಪ, ಪದ್ಮಾವತಿ ಶೆಟ್ಟಿ ಇವರುಗಳು ಭಾಗವಹಿಸಿದ್ದರು.

ಲಾಲ್ ಬಾಗ್ ಬಳಿ ಇರುವ ಹೋಂ ಇಂಡಸ್ಟ್ರೀಸ್ ಡಿಪೋದ ಆವರಣದಲ್ಲಿ ಬೀಡಿ ಕಾರ್ಮಿಕರ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕೆ. ಆರ್. ಶ್ರೀಯಾನ್ ಮಾತನಾಡುತ್ತಾ ಬೀಡಿ ಕಾರ್ಮಿಕರು ತಮ್ಮ ಸಮಸ್ಯೆಗಳ ಬಗ್ಗೆ ಸಂಘಟಿತ ಹೋರಾಟ ಮಾಡಲು ಕರೆ ನೀಡಿದರು.

ಜೆ. ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿ ಫೆಡರೇಶನ್ನಿನ ಉಪಾಧ್ಯಕ್ಷರಾದ ಯು.ಬಿ. ಲೋಕಯ್ಯ ವಂದಿಸಿದರು. ಈ ಪ್ರತಿಭಟನೆ ಕಾರ್ಯಕ್ರಮ ಬಂಟ್ವಾಳ, ಬೆಳ್ತಂಗಡಿ, ಮೂಡಬಿದ್ರೆ, ಉಡುಪಿ, ಕುಂದಾಪುರಗಳಲ್ಲಿ ನಡೆದ ವರದಿಗಳು ಬಂದಿರುತ್ತವೆ. ಜಿಲ್ಲೆಯಾದ್ಯಂತ ಚಳುವಳಿಯಲ್ಲಿ ಭಾಗವಹಿಸಿದ ಬೀಡಿ ಕಾರ್ಮಿಕರನ್ನು ಸೌತ್ ಕೆನರಾ ವರ್ಕರ್ಸ್ ಫೆಡರೇಶನ್ (ಸಿಐಟಿಯು) ಅಭಿನಂದಿಸಿದೆ.

ಜನಾರ್ಧನ ನಾಯಕರಿಗೆ ಶ್ರದ್ಧಾಂಜಲಿ

ಇತ್ತೀಚಿಗೆ ಅಗಲಿದ ದ.ಕನ್ನಡ ಜಿಲ್ಲೆಯ ಸಿಪಿಐ(ಎಂ) ಹಿರಿಯ ಮುಖಂಡರೂ, ಜಿಲ್ಲಾ ರೈತ ಸಂಘದ ಅಧ್ಯಕ್ಷರು ಆದ ಕಾಮ್ರೇಡ್ ಜನಾರ್ಧನ ನಾಯಕ್ ರವರಿಗೆ ಡಿಸೆಂಬರ್ 12 ರಂದು ಬಂಟ್ವಾಳ ಸಿಪಿಐ(ಎಂ) ತಾಲ್ಲೂಕು ಸಮಿತಿ ಸಾರ್ವಜನಿಕ ಸಭೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಿತು.

ತಾಲ್ಲೂಕು ಕಾರ್ಯದರ್ಶಿ ಬಿ.ವಾಸುಗಟ್ಟಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಬಿ.ನಾರಾಯಣ, ಡಿವೈಎಫ್ಐನ ಕಾರ್ಯದರ್ಶಿ ಬಿ.ಉದಯ ಕುಮಾರ್ ಮತ್ತು ಪಕ್ಷದ ಮುಖಂಡರಾದ ಮೋನಪ್ಪ ಸಪಲ್ಯ ಮೊದಲಾದವರು ಮಾತನಾಡಿ, ಜಿಲ್ಲೆಯ ರೈತ ಕಾರ್ಮಿಕ ಚಳುವಳಿಯಲ್ಲಿ ಜನಾರ್ಧನ ನಾಯಕ್ ರವರ ಪ್ರಮುಖ ಪಾತ್ರದ ಬಗ್ಗೆ ಸ್ಮರಿಸಿದರು.

ಡಿಸೆಂಬರ್ 11 ರ ಹರತಾಳ-ಮುಷ್ಕರ

ಪುಟ 3 ರಿಂದ

ಮುಷ್ಕರದ ನೇತೃತ್ವವನ್ನು ಡಿ.ವೈ.ಎಫ್.ಐ.ನ ಸಂಜೀವಪ್ಪ ಮತ್ತು ಹೇಮಂತ್ ರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ಆರ್. ಚಂದ್ರತೇಜಸ್ವಿ, ರೇಣುಕಾರಾಧ್ಯ, ಸಿ.ಐ.ಟಿ.ಯು ವಿನ ಕೃಷ್ಣಮೂರ್ತಿ, ಎ.ಐ.ಟಿ.ಯು.ಸಿ. ವಿನ ಅಶ್ವಥನಾರಾಯಣ ಮತ್ತು ಬೋರಲಿಂಗಯ್ಯ ವಹಿಸಿದ್ದರು.

ದಾಂಡೇಲಿ: ದೇಶ ಪ್ರೇಮಿ ದುಡಿಯುವ ಜನತೆಯ 56 ಸಾಮೂಹಿಕ ಸಂಘಟನೆಯ ಡಿಸೆಂಬರ್ 11 ಸಾರ್ವತ್ರಿಕ ಮುಷ್ಕರದ ಅಂಗವಾಗಿ ದಾಂಡೇಲಿಯಲ್ಲಿ ಎಲ್ಲಾ ಅಂಗಡಿಗಳು, ಬ್ಯಾಂಕು ಜೀವವಿಮಾ ನಿಗಮ ಹಾಗೂ ಚಿತ್ರಮಂದಿರಗಳು ಬಂದ್ ಆಗಿದ್ದವು. ಕಾಗದ ಕಾರ್ಖಾನೆ ಹಾಗೂ ಫೆರೊ ಅಲಾಯ್ಸ್ ಕಾರ್ಖಾನೆಗಳಲ್ಲಿ ಪ್ರತಿಶತ 30 ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು. 1500 ಕಾರ್ಮಿಕರು ದಾಂಡೇಲಿಯ ಎಲ್ಲಾ ಬೀದಿಗಳಲ್ಲಿ ಮೆರವಣಿಗೆ ಮಾಡಿದರು. ನಂತರ ಪೇಪರ ಮಿಲ್‌ನ ಮುಖ್ಯದ್ವಾರ ಎದುರಿಗೆ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಉತ್ತರ ಕನ್ನಡ ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಟಿ.ಎಸ್. ನಾಯ್ಕ ಹಾಗೂ ಪೇಪರ್ ಮಿಲ್ ಎಂಪ್ಲೋಯ್ಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಎಸ್.ವಿ. ಸಾವಂತ ರವರು ಮಾತನಾಡಿದರು.

ಜೀವ ವಿಮಾ ನಿಗಮ ಹಾಗೂ ಬ್ಯಾಂಕ್ ಉದ್ಯೋಗಿಗಳು ಪ್ರತ್ಯೇಕ ಮೆರವಣಿಗೆ ನಡೆಸಿದರು.

ಶಹಬಾದ್: ಸಿಐಟಿಯು ಜಿಲ್ಲಾ ಕಾರ್ಯದರ್ಶಿಗಳಾದ ಕಾಂ॥ ಚಂದುಜಾಧವ, ಚಿತ್ತಾಪೂರ ತಾಲೂಕಿನ ಕರ್ನಾಟಕ ಪ್ರಾಂತ ರೈತ ಸಂಘದ ಸಂಘಟನಾ ಕಾರ್ಯದರ್ಶಿಗಳಾದ ಕಾಂ॥ ಮರಲಿಂಗಪ್ಪ ಕಮಂದೆಡಗಿ ಈ ಮುಷ್ಕರದ ಮುಂದಾಳತ್ವವನ್ನು ವಹಿಸಿದ್ದರು. ಎ.ಬಿ.ಎಲ್. ಕಾರ್ಮಿಕರು, ರೈತ ಸಂಘದವರು, ಡಿ.ವೈ.ಎಫ್.ಐ. ಹಾಗೂ ವಿದ್ಯಾರ್ಥಿ ಎ.ಐ.ಎಸ್.ಎಫ್. ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಇವರನ್ನು ಉದ್ದೇಶಿಸಿ ಕಾಂ॥ ಚಂದು ಜಾಧವ ಮಾತನಾಡಿದರು

ಕುಂದಗೋಳ: ಡಿ.11 ಸಾರ್ವತ್ರಿಕ ಮುಷ್ಕರ ಬೆಂಬಲಿಸಿ ಎಸ್.ಎಫ್.ಐ. ಕರೆಯ ಮೇರೆಗೆ ವಿದ್ಯಾರ್ಥಿಗಳು ವರ್ಗ ಬಹಿಷ್ಕರಿಸಿದರು ಅರಳಿಕಟ್ಟಿಯಲ್ಲಿ ರಸ್ತಾ ರೋಖೋ ಮಾಡಲಾಯಿತು. ಪರವೇಶ ಕುರಹಟ್ಟಿ ಸೋಮಶೇಕರ ಶಂಕರ ಮುಂತಾದವರು ನೇತೃತ್ವ ವಹಿಸಿದರು.

ರೈತರಿಂದ ರಸ್ತೆ ತಡೆ ಚಳುವಳಿ:

ಬಿಜಾಪುರದ ಸಿಂದಗಿಯಲ್ಲಿ ಡಿ.11 ರ ಮುಷ್ಕರದ ಭಾಗವಾಗಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ರೈತರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಬಿಜಾಪುರ, ಸಿಂಧಗಿ, ಸೇದ್ವಾರಿಯಲ್ಲಿ ರಸ್ತೆ ತಡೆ ಚಳುವಳಿ ನಡೆಸಿದರು.

ಕಾಂಗ್ರೆಸಿನ ವಿನಾಶಕಾರಿ ಆರ್ಥಿಕ ನೀತಿಯನ್ನೆ ಬಿಜೆಪಿಯು ಮುಂದುವರಿಸಿ ಜನಸಾಮಾನ್ಯರ ಅಗತ್ಯ ವಸ್ತುಗಳ ಬೆಲೆ ಏರಿಸಿರುವುದನ್ನು ರೈತ ಸಂಘದ ಮುಖಂಡರಾದ ಅಣ್ಣರಾಯ ಈಳಗೆರ ಖಂಡಿಸಿ ಇದೇ ನೀತಿಯಿಂದಾಗಿಯೇ ದೇಶದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದರು.

ರೈತ ಸಂಘದ ಎ.ಹೆಚ್.ಹೊನ್ನುಟಗಿ, ಕಾಂಗ್ರೆಸಿನ ಸುಣಗಾರ, ವಕೀಲರಾದ ಮುಲ್ಲಾ, ಬಗಲಿ ಮೊದಲಾದವರು ಮಾತನಾಡಿ ಕೇಂದ್ರ ಸರ್ಕಾರದ ಕೋಮುವಾದಿ ನೀತಿಯನ್ನು ಬದಲಿಸುವಂತೆ ಒತ್ತಾಯಿಸಿದರು. ಪ್ರಾರಂಭದಲ್ಲಿ ನಡೆದ ಮೆರವಣಿಗೆಯ ನೇತೃತ್ವವನ್ನು ಸಿದ್ಧಣ್ಣಾ ಐರೋಡಗಿ, ಚಿನ್ನಪ್ಪ ಕಂಬಾರ, ಐ.ಹೆಚ್. ನಾಗರಾಜ ವಹಿಸಿದ್ದರು. ಕೊನೆಯಲ್ಲಿ ತಹಸಿಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ತುಮಕೂರು

ಜಿಲ್ಲೆಯ ಮಧುಗಿರಿ ತಾಲೂಕಿನ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಡಿ.11 ರ ಮುಷ್ಕರದ ಕರೆಗೆ ಓಗೊಟ್ಟು ಅಂಗನವಾಡಿ ಕೇಂದ್ರಗಳನ್ನು ಬಹಿಷ್ಕರಿಸಿ ತಾಲೂಕು ಕಛೇರಿಗೆ ಮೆರವಣಿಗೆ ಮೂಲಕ ಮುತ್ತಿಗೆ ಹಾಕಿದರು. ಸಂಘದ ಜಿಲ್ಲಾ ಸಂಚಾಲಕ ಅಲ್ಲಾ ಬಕಾಶ್ ಮಾತನಾಡಿ ಕೇಂದ್ರ ಸರ್ಕಾರದ ನೀತಿಯಿಂದಾಗಿ ಅಸಂಘಟಿತ ಕಾರ್ಮಿಕರು ಸಂಕಷ್ಟಕೊಳಗಾಗಿದ್ದಾರೆ ಎಂದರು. ಸಂಘದ ಮುಖಂಡರಾದ ಮಲ್ಲಮ್ಮ ಎಸ್.ಡಿ. ಪಾರ್ವತಮ್ಮ, ಕಮಲ ಮೊದಲಾದವರು ಮಾತನಾಡಿದರು. ಪ್ರತಿಭಟನಾ ಸ್ಥಳಕ್ಕೆ ಸಿಡಿಪಿಓಅಜ ಮತ್ತು ಶಿರಸ್ತೆದಾರರು ಬಂದು ಮನವಿ ಸ್ವೀಕರಿಸಿದರು. ಮೆರವಣಿಗೆಯ ಮಂಚೋಣಿಯಲ್ಲಿ ಸಣ್ಣ ಕಾಮಕ್ಕ, ಜಯಂತಿ, ಸುಮೇಂದ್ರಮ್ಮ ಶಕುಂತಲ, ಸರೋಜ ಹಾಗೂ ಗಂಗಮ್ಮ ಮೊದಲಾದವರು ಇದ್ದರು.

ಗುಬ್ಬಿ: ತಾಲೂಕಿನ ಅಂಗನವಾಡಿ ಕಾರ್ಯಕರ್ತೆಯರು ಗುಬ್ಬಿ ವೀರಣ್ಣ ವೃತ್ತದಲ್ಲಿ ರಸ್ತೆ ತಡೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಖಾಸಗೀಕರಣ ನೀತಿ ವಿರೋಧಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಜಿಲ್ಲಾ ಸಂಘಟನಾ ಸಂಚಾಲಕಿ ಬಿ.ಎಮ್. ಪ್ರೇಮಾ, ತಾಲೂಕು ಅಧ್ಯಕ್ಷರಾದ ಕೆ.ಟಿ. ಲಲಿತ ಪ್ರಭ, ಹೆಚ್.ಯು ಅನುಸೂಯ ಮಾತನಾಡಿದರು. ಎಸ್.ಎಫ್.ಐ.ನ ಡಿ.ಹೆಚ್ ಸತೀಶ್, ಸಿಐಟಿಯುವಿನ ಎನ್.ಕೆ. ಉಮೇಶ್ ಮಾತನಾಡಿ ಕೋಮುವಾದವನ್ನು ವಿರೋಧಿಸಿದರು. ಮಂಜುಳಾ, ಸುಧಾ, ಸುಮ ಪಾರ್ವತಮ್ಮ ಭಾಗ್ಯಮ್ಮ ಸಾವಿತ್ರಮ್ಮ ಮೊದಲಾದವರು ನೇತೃತ್ವವಹಿಸಿದ್ದರು., ನಂತರ ತಹಸೀಲ್ದಾರರಿಗೆ ಮನವಿಸಲ್ಲಿಸಲಾಯಿತು.

ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಖಾಸಗೀಕರಣ, ವ್ಯಾಪಾರೀಕರಣ ಮತ್ತು ಕೋಮುವಾದೀಕರಣ ಗೊಳಿಸುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಮತ್ತು ಗ್ರಾಮೀಣ ಕೃಪಾಂಕಕ್ಕೆ ಸುಗ್ರೀವಾಜ್ಞೆ ಹೊರಡಿಸಿ ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ಆಗ್ರಹಿಸಿ ಇಂದು ಎಸ್.ಎಫ್.ಐ., ಪಿ.ಜೆ.ಡಿ. ಜಂಟಿಯಾಗಿ ನಡೆಸಿದ ಅಖಿಲ ಭಾರತ ವಿದ್ಯಾರ್ಥಿ ಮುಷ್ಕರವು ಯಶಸ್ವಿಯಾಯಿತು.

ನಗರದ ಟೌನ್‌ಹಾಲ್ ವೃತ್ತದಿಂದ ಹೊರಟ ಪ್ರತಿಭಟನಾ ಮೆರವಣಿಗೆದಾರರು ಟೌನ್‌ಹಾಲ್ ವೃತ್ತದಲ್ಲಿ ಕೇಂದ್ರ ಮಾನವ ಸಂಪನ್ಮೂಲ ಸಚಿವ ಡಾ॥ ಮುರುಳಿ ಮನೋಹರ ಜೋಷಿಯವರ ಭೂತದಹನ ಮಾಡಿದರು ನಂತರ ಮೆರವಣಿಗೆಯು ನಗರದ ಪ್ರಮುಖ ರಸ್ತೆಗಳಲ್ಲಿ ಘೋಷಣೆಗಳ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ತಲುಪಿ ಗ್ರಾಮೀಣ ಕೃಪಾಂಕಕ್ಕೆ ಸುಗ್ರೀವಾಜ್ಞೆ ತರಲು ಒತ್ತಾಯಿಸಿ ಹಾಗೂ ಶಿಕ್ಷಣದ ಖಾಸಗೀಕರಣ ಕೋಮುವಾದೀಕರಣ ವಿರೋಧಿಸಿ ರಾಷ್ಟ್ರಪತಿಯವರಿಗೆ ರಾಜ್ಯಪಾಲರಿಗೆ ಮುಖ್ಯಮಂತ್ರಿಗಳಿಗೆ ಪ್ರಧಾನ ಮಂತ್ರಿಯವರಿಗೆ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳ ಮೂಲಕ ನೀಡಲಾಯಿತು.

ನಗರದ ಟೌನ್‌ಹಾಲ್‌ನಲ್ಲಿ ನಡೆದ ಸಾಮೂಹಿಕ ಸಂಘಟನೆಗಳು ವೇದಿಕೆಯ ಬಹಿರಂಗ ಸಭೆಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಂಡರು. ಪ್ರತಿಭಟನಾ ಮೆರವಣಿಗೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಎಸ್.ಎಫ್.ಐ. ಜಿಲ್ಲಾಧ್ಯಕ್ಷ ಎನ್.ಕೆ. ಸುಬ್ರಮಣ್ಯರವರು, ವಿಜೆಡಿಯ ಕೃಷ್ಣಪ್ಪನವರು ಮಾತನಾಡಿದರು. ಪ್ರತಿಭಟನಾ ಮೆರವಣಿಗೆಯ ನೇತೃತ್ವವನ್ನು ಎಸ್‌ಎಫ್‌ಐ ನ ವಸಂತ ಕುಮಾರ್, ರಘು, ರಮೇಶ್, ಅಶೋಕ್ ವಿಜಯಕುಮಾರ್ ವಹಿಸಿದ್ದರು.

ವ್ಯಾಪಕ ಖಂಡನೆ - ಒಂಟಿಯಾದ ಆಂಗ್ಲೋ ಅಮೆರಿಕನ್ನರು

ಇರಾಕ್ ಮೇಲೆ ಅಮೆರಿಕದಿಂದ ನಾಲ್ಕು ರಾತ್ರಿಗಳ ಸತತ ಬರ್ಬರ ಧಾಳಿ

ವಿಶ್ವಸಂಸ್ಥೆಯ ಶಸ್ತ್ರಾಸ್ತ್ರ ಪರೀಕ್ಷರ ಮುಗಿಯದ ಪರೀಕ್ಷಣೆ ಜತೆ ಸಹಕರಿಸಲಿಲ್ಲ ಎಂಬ ಹಳೆಯ ನೆಪವೊಡ್ಡಿ ಅಧ್ಯಕ್ಷ ಕ್ಲಿಂಟನ್ ಇರಾಕ್ ಮೇಲೆ ನಾಲ್ಕು ದಿನ ಸತತ ಬರ್ಬರ ಕ್ಷಿಪಣಿ, ಬಾಂಬು ಧಾಳಿ ನಡೆಸಿದರು. ಪಾರ್ಲಿಮೆಂಟಿನಿಂದ ಲೈಂಗಿಕ ಹಗರಣದಲ್ಲಿ ಅಧ್ಯಕ್ಷರನ್ನು ಪದಚ್ಯುತ ಮಾಡುವ ಬಗ್ಗೆ ಮತದಾನ ನಡೆಯಬೇಕಾದ ಹಿಂದಿನ ದಿನ ಈ ದಾಳಿ ಆರಂಭವಾಗಿದ್ದು, ದೇಶದ ಪಾರ್ಲಿಮೆಂಟಿನ ಗಮನ ಬೇರೆಡೆ ಸೆಳೆಯುವ ಪ್ರಯತ್ನ ಎಂದು ವ್ಯಾಪಕವಾಗಿ ಈ ಕಾರ್ಯಾಚರಣೆಯನ್ನು ಖಂಡಿಸಲಾಯಿತು, ಲೇವಡಿ ಮಾಡಲಾಯಿತು. ಬ್ರಿಟಿಶರು ಬಿಟ್ಟರೆ ಅಧ್ಯಕ್ಷ ಕ್ಲಿಂಟನ್‌ರ ಈ ಕ್ರಮಕ್ಕೆ ಯಾರೂ ಬೆಂಬಲ ನೀಡಿಲ್ಲ - ನಾಟೋದ ಸಹಚರ ದೇಶಗಳೂ ಸೇರಿ. ರಶ್ಯ, ಚೀನಾ ಸೇರಿ ಈ ಆಂಗ್ಲೋ ಅಮೆರಿಕನ್ ಧಾಳಿಯನ್ನು ವ್ಯಾಪಕವಾಗಿ ಖಂಡಿಸಲಾಗಿದೆ. ಅಮೆರಿದಲ್ಲಿ ಹಲವುಕಡೆ ಇದರ ವಿರುದ್ಧ ಪ್ರದರ್ಶನಗಳು ನಡೆದವು. ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಸಹ ಇದು 'ದುಃಖಕರ ದಿನ' ಎಂದು ಬಣ್ಣಿಸಿದರು. ರಶ್ಯ ತನ್ನ ಅಮೆರಿಕದಲ್ಲಿನ ರಾಯಭಾರಿಯನ್ನು ವಾಪಸು ಕರೆಸಿಕೊಂಡಿದೆ- ಸಮಾಲೋಚನೆಗೆ.

ಅಮೆರಿಕ ನೂರಕ್ಕೂ ಹೆಚ್ಚು ಗುರಿಗಳನ್ನು ಕ್ಷಿಪಣಿ, ಬಾಂಬ್‌ದಾಳಿಗಳಲ್ಲಿ ನಾಶ ಮಾಡಿದೆ ಎಂದು ಅಮೆರಿಕನ್ ರಕ್ಷಣಾ ಖಾತೆ ಹೇಳಿಕೊಂಡಿದೆ. 60 ಕ್ಕೂ ಹೆಚ್ಚು ಜನ ಸತ್ತಿದ್ದಾರೆ. ನೂರಾರು ಜನ ಗಾಯಗೊಂಡಿದ್ದಾರೆ ಎಂದು ಇರಾಕ್ ಹೇಳಿದೆ. ಇರಾಕ್‌ನ ಅಧ್ಯಕ್ಷರ ವಿಶೇಷ ಪಡೆ ರಿಪಬ್ಲಿಕನ್ ಗಾರ್ಡ್‌ನ ಕಚೇರಿಗಳು, ರಾಸಾಯನಿಕ ಜೈವಿಕ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಾರ್ಖಾನೆಗಳು, ಮಿಲಿಟರಿ ಸ್ಥಾವರಗಳನ್ನು ಮಾತ್ರ ಬಾಂಬ್ ದಾಳಿಗೆ ಗುರಿ ಮಾಡಲಾಗಿದೆ ಎಂದು ಅಮೆರಿಕ ಹೇಳಿದ್ದನ್ನು ಇರಾಕ್ ಅಲ್ಲಗೆಳೆದಿದೆ. ತೈಲ ಶುದ್ಧೀಕರಣ ಸ್ಥಾವರಗಳು, ಬ್ಯಾಟರಿ ಮುಂತಾದ ನಾಗರಿಕ ಸಾಮಗ್ರಿಗಳನ್ನು ಉತ್ಪಾದಿಸುವ ಕಾರ್ಖಾನೆಗಳು, ಆಸ್ಪತ್ರೆಗಳು, ಜನವಸತಿ ಇರುವ ಪ್ರದೇಶಗಳನ್ನು ಗುರಿ ಮಾಡಿಯೂ ಬಾಂಬ್ ದಾಳಿ ನಡೆದಿದೆ ಎಂದು ಇರಾಕ್ ಹೇಳಿದೆ. 'ಮರುಭೂಮಿ ತೋಳ' (Desert Fox) ಎಂದು ಕರೆಯಲಾದ ಈ ಆಂಗ್ಲೋ ಅಮೆರಿಕನ್ ದಾಳಿಯಲ್ಲಿ 500 ಕ್ಕೂ ಹೆಚ್ಚು 'ಕ್ರೂಯಿಸ್' ಕ್ಷಿಪಣಿಗಳನ್ನು ಇರಾಕ್ ಕಡೆಗೆ ಎಸೆಯಲಾಯಿತು. ಇದು 1991 ರ ಇರಾಕ್ ಮೇಲಿನ 5 ವಾರಗಳ ಯುದ್ಧದಲ್ಲಿ ಬಳಸಲಾದ ಕ್ಷಿಪಣಿಗಿಂತ ಹೆಚ್ಚು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಇರಾಕ್‌ನ ರಾಸಾಯನಿಕ, ಜೈವಿಕ ಮತ್ತಿತರ ಸಾಮೂಹಿಕ ಮಾರಕ ಅಸ್ತ್ರಗಳು, ಅವುಗಳ ತಯಾರಿಗೆ ಬೇಕಾದ ವ್ಯವಸ್ಥೆಯನ್ನು ನಾಶ ಮಾಡುವುದು ತಮ್ಮ ಗುರಿ, ಅದನ್ನು ಪೂರೈಸಲಾಗಿದೆ ಎಂದು ಅಮೆರಿಕ-ಬ್ರಿಟಿಶ್ ಸರ್ಕಾರಗಳು ಹೇಳಿದ್ದರೂ, ಅವರ ನಿಜವಾದ ಗುರಿ ಸದ್ದಾಂ ಹುಸೇನರ ರಿಪಬ್ಲಿಕನ್ ಗಾರ್ಡ್ಸ್ ಎಂಬ ವಿಶೇಷ ಪಡೆಯನ್ನು ನಿಶ್ಚೇತಗೊಳಿಸಿ, ಸದ್ದಾಂ - ವಿರೋಧಿ ಶಕ್ತಿಗಳಿಗೆ ಕ್ಷಿಪ್ರಕ್ರಾಂತಿಯನ್ನು ನಡೆಸಲು ಕುಮ್ಮಕ್ಕು ಕೊಡುವುದು. ಸದ್ದಾಂ ಹುಸೇನ್ ಸರ್ಕಾರವನ್ನು ದಯನೀಯ ಸ್ಥಿತಿಯಲ್ಲಿ ಸೋಲಿಸುವ ಮೂಲಕ, ಸಾರ್ವಜನಿಕ ಅವಹೇಳನಕ್ಕೆ ಗುರಿ ಮಾಡುವುದು - ಇದೆಲ್ಲಾ ಉದ್ದೇಶ. ಬಾಂಬ್ ದಾಳಿಗಳು ಇರಾಕಿ ಮಿಲಿಟರಿ ಶಕ್ತಿಗೆ ಸಾಕಷ್ಟು ಹಾನಿಯುಂಟುಮಾಡಿದ್ದರೂ, ಈ ಎಲ್ಲಾ ಗುರಿ ಮುಟ್ಟಲಾಗಿದೆ ಎಂಬ ಕ್ಲಿಂಟನ್ ಹೇಳಿಕೆ ಅರ್ಥಹೀನ ಎಂಬುದು ಸ್ಪಷ್ಟ. ಉತ್ತರ ಇರಾಕ್‌ನಲ್ಲಿ ಕುರ್ದಿಶ್ ಪ್ರತ್ಯೇಕತಾವಾದಿಗಳು, ಹಾಗೂ ದಕ್ಷಿಣದಲ್ಲಿ ಶಿಯಾ ಉಗ್ರವಾದಿಗಳಿಗೆ ಅಮೆರಿಕ ಹಲವು ವರ್ಷಗಳಿಂದ ಬೆಂಬಲ ಕೊಡುತ್ತಿದ್ದರೂ ಸದ್ದಾಂ ಸರ್ಕಾರಕ್ಕೆ ಏನೂ ಮಾಡಲಾಗಿಲ್ಲ ಎಂಬುದು ಸ್ಪಷ್ಟ.

ನಾಲ್ಕು ದಿನಗಳ ದಾಳಿಯನ್ನು ನಿಲ್ಲಿಸಿರುವುದು 'ಗುರಿ ಮುಟ್ಟಲಾಗಿದೆ' ಎಂಬ ಕಾರಣಕ್ಕಲ್ಲ. ಜಗತ್ತಿನಲ್ಲಿ ಒಬ್ಬಂಟಿಗನಾಗಿರುವುದು, ವ್ಯಾಪಕ ಖಂಡನೆ ಅಷ್ಟೇ ಕಾರಣ. ವ್ಯಾಪಕ ಖಂಡನೆಗೆ ಗುರಿಯಾಗಿರುವುದು, ಮುಸ್ಲಿಂ ಪವಿತ್ರ ತಿಂಗಳು ರಂಜಾನು ಆರಂಭವಾಗಿದ್ದು, ಇಡೀ ಇರಾನ್ ಹಾಗೂ ಮುಸ್ಲಿಂ ಸಮುದಾಯದಲ್ಲಿ ಆಕ್ರೋಶ ಎದುರಿಸಲು ಸಿದ್ದರಿಲ್ಲದಿರುವುದು ಕಾರಣ ಎಂದು ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.



ವಿನೋಕಾಲ್ ಪ್ರಾಜೆಕ್ಟ್ ರದ್ದು - ತಾಲಿಬಾನ್‌ಗೆ ಹಿನ್ನಡೆ


ತಾಲಿಬಾನ್ ಸರ್ಕಾರ ಅಫಘಾನಿಸ್ತಾನದ ದೊಡ್ಡ ಪ್ರದೇಶಗಳನ್ನು ತನ್ನ ನಿಯಂತ್ರಣಕ್ಕೆ ತಂದ ಮೇಲೆ ಸಾಮಾನ್ಯ ಸ್ಥಿತಿ ಏರ್ಪಡುತ್ತದೆ, ಆಮೇಲೆ ಆರ್ಥಿಕ ಚಟುವಟಿಕೆ ಚುರುಕಾಗುತ್ತದೆ, ತಮ್ಮ ಬೇಳೆ ಬೇಯಿಸಿಕೊಳ್ಳಬಹುದು ಎಂದು ಭಾವಿಸಿದ್ದ ಬಹುರಾಷ್ಟ್ರೀಯ ಕಂಪನಿಗಳಿಗೆ ನಿರಾಸೆ ಕಾದಿದೆ. ಭ್ರಮನಿರಸನವಾಗಿದೆ. ತಾಲಿಬಾನ್‌ರಿಗೆ ಅಪಾರ ಸಂಪನ್ಮೂಲ ಒದಗಿಸಿದ ಅಮೆರಿಕನ್ ತೈಲ ಕಂಪನಿ ವಿನೋಕಾಲ್‌ಗೆ ಈ ರೀತಿಯ ಭ್ರಮನಿರಸನವಾಗಿದೆ.

ವಿನೋಕಾಲ್ ಕಂಪನಿಗೆ ತುರ್ಕಿಮಾನಿಸ್ತಾದಲ್ಲಿರುವ ಪ್ರಾಕೃತಿಕ ಗ್ಯಾಸನ್ನು ಅಫಘಾನಿಸ್ತಾನದ ಮೇಲೆ ಪೈಪುಗಳ ಮೂಲಕ ಪಾಕಿಸ್ತಾನ, ಭಾರತದ ಬಂದರುಗಳಿಗೆ ತಲುಪಿಸಿ ಅಂತರ್ರಾಷ್ಟ್ರೀಯ ಮಾರುಕಟ್ಟೆ ಮುಚ್ಚುವ ಮಹಾಕನಸಿನ ಪ್ರಾಜೆಕ್ಟನ್ನು ರದ್ದು ಮಾಡಲು ನಿರ್ಧರಿಸಿದೆ. 8 ಶತಕೋಟಿ ಡಾಲರ್ ಬೆಲೆಬಾಳುವ ಈ ಪ್ರಾಜೆಕ್ಟ್‌ನ್ನು ಅಫಘಾನಿಸ್ತಾನದಲ್ಲಿ ತಾಲಿಬಾನ್ ಭದ್ರ ನೆಲೆ ಇಲ್ಲಿರುವ ಕಾರಣ ರದ್ದು ಮಾಡಲಾಗಿತ್ತು. 1600 ಕಿ.ಮಿ. ಗ್ಯಾಸ್ ಪೈಪ್‌ಲೈನನ್ನು ರಚಿಸುವ ಮೂಲಕ ರಶ್ಯಾ, ಇರಾನ್‌ಗಳಿಗೆ ಪೈಪೋಟಿ ನೀಡುವುದು ವಿನೋಕಾಲ್ ಉದ್ದೇಶವಾಗಿತ್ತು. ಆದರೆ ಈಗ ಇದು ಕನಸಿನ ಮಾತಾಗಿ ಉಳಿದಿದೆ.

ಕ್ಲಿಂಟನ್ ಪದಚ್ಯುತಿಗೆ ಕೆಳಮನೆ ಅಸ್ತು

ಅಧ್ಯಕ್ಷ ಕ್ಲಿಂಟನ್ ಮೇಲೆ ಲೈಂಗಿಕ ಹಗರಣದ ಹಿನ್ನೆಲೆಯಲ್ಲಿ ಹೊರಿಸಲಾದ ನಾಲ್ಕು ಆರೋಪಗಳಲ್ಲಿ ಎರಡನ್ನು ಕೆಳಮನೆ ಬಹುಮತದಿಂದ ಬೆಂಬಲಿಸಿದ್ದು, ಅವರ ಪದಚ್ಯುತಿಗೆ ಅಸ್ತು ಕೊಟ್ಟಂತಾಗಿದೆ. ಇರಾಕ್ ದಾಳಿಯ ನಾಟಕ ಮತ್ತಿತರ ಕ್ರಮಗಳಿಂದ ಕ್ಲಿಂಟನ್ ಪದಚ್ಯುತಿಯನ್ನು ತಪ್ಪಿಸಲು ಸಾಧ್ಯವಾಗಿಲ್ಲ ಕೆಳಮನೆ ಅಸ್ತು ನಂತರ ಪದಚ್ಯುತಿಯ ಪ್ರಕರಣ ಸೆನೆಟ್(ಮೇಲ್ಮನೆ)ಗೆ ಹೋಗುತ್ತದೆ. ಸೆನೆಟ್‌ನಲ್ಲಿ ಪದಚ್ಯುತಿಯ ವಾಗ್ದಂಡನೆಗೆ ಇಳಿಸುವ ಪ್ರಯತ್ನ ತೀವ್ರವಾಗಿ ನಡೆಯುತ್ತಿದೆ. ಪದಚ್ಯುತಿ ಬಗ್ಗೆ ನಡೆದ ಎರಡು ಪಕ್ಷಗಳ ಸದಸ್ಯರು ತಮ್ಮ ಪಕ್ಷದ ನಿಲುವಿನ ವಿರುದ್ಧ ಮತ ನೀಡುವುದು ಕಂಡು ಬಂದಿದೆ.

ಲೋಕಸಂಚಾರ



ಸಿಂಧ್‌ನಲ್ಲಿ ಗವರ್ನರ್ ಆಡಳಿತ ಕರಾಚಿಗೆ ಮಿಲಿಟರಿ ಕೋರ್ಟುಗಳು

ಸಿಂಧ್‌ನಲ್ಲಿ ನಾಗರಿಕ ಸರ್ಕಾರವನ್ನು ವಜಾ ಮಾಡಿ ಗವರ್ನರ್ ಆಡಳಿತ ಜಾರಿ ಹಾಗೂ ಕರಾಚಿಗೆ ಮಿಲಿಟರಿ ಕೋರ್ಟುಗಳನ್ನು ರಚಿಸುವ ಮೂಲಕ ಪಾಕಿಸ್ತಾನ ಪ್ರಧಾನಿ ನವಾಜ್ ಶರೀಫ್ ಸರ್ವಾಧಿಕಾರದತ್ತ ಇನ್ನೊಂದು ಹೆಜ್ಜೆ ಇಟ್ಟಿದ್ದಾರೆ. ಮಾತ್ರವಲ್ಲ ಪ್ರಜಾಸತ್ತೆಯನ್ನು ದುರ್ಬಲಗೊಳಿಸುವಲ್ಲಿ ರಾಜಕೀಯ ಪಕ್ಷಗಳು ಹಾಗೂ ಮಿಲಿಟರಿ ನಡುವೆ ಈ ಹೊಸ ಸಹಕಾರದ ಅಪಾಯಕಾರಿ ಸಾಧ್ಯತೆಯನ್ನು ತೆರೆದಿದ್ದಾರೆ. ಶರೀಯತ್ ಇಸ್ಲಾಮಿಕ್ ಕಾನೂನಿಗೆ ಬೆಂಬಲ ನಿರಾಕರಿಸಿದ MQM ನ (ಭಾರತೀಯ ಮೂಲದ ವಲಸೆಗಾರರ ಪಕ್ಷ) ಸರ್ಕಾರವನ್ನು ಸಿಂಧ್‌ನಲ್ಲಿ ವಜಾ ಮಾಡಲಾಗಿದೆ. ಈ ಸರ್ಕಾರದಲ್ಲಿ ಶರೀಫರ ಪಾಕಿಸ್ತಾನ ಮುಸ್ಲಿಂ ಲೀಗ್ ಕಿರಿಯ ಸಹಭಾಗಿ ಎಂದು ಇಲ್ಲಿ ನೆನಪಿಸಿಕೊಳ್ಳಬೇಕು. ಒಂದು ರೀತಿಯಲ್ಲಿ ಶರೀಫ್ ತನ್ನದೇ ಪಕ್ಷ ಭಾಗವಹಿಸುತ್ತಿರುವ ಸರ್ಕಾರವನ್ನು ವಜಾ ಮಾಡಿದ್ದಾರೆ ಎನ್ನಬಹುದು.

ಕರಾಚಿಯಲ್ಲಿ ಭಯೋತ್ಪಾದನೆಯಿಂದ ಹಿಡಿದು ಕಾರು ಕಳ್ಳತನದವರೆಗೆ ವಿಚಾರಣೆ ನಡೆಸಲು ಮಿಲಿಟರಿ ಕೋರ್ಟುಗಳನ್ನು ಸ್ಥಾಪಿಸಲಾಗುವುದು ಎಂಬ ಘೋಷಣೆಯನ್ನು ವಿರೋಧ ಪಕ್ಷಗಳು, ಪತ್ರಿಕೆಗಳು, ಮಾನವ ಹಕ್ಕು ಕಾರ್ಯಕರ್ತರು ಬಲವಾಗಿ ವಿರೋಧಿಸಿದ್ದಾರೆ.

ನೇಪಾಳದಲ್ಲಿ ಇನ್ನೊಂದು ಸರ್ಕಾರದ ಪತನ ಸನ್ನಿಹಿತ ಮತ್ತೊಂದು ಸರ್ಕಾರಕ್ಕೆ ಯತ್ನ

ನೇಪಾಳದಲ್ಲಿ ಕೊಯಿರಾಲ ನೇಪಾಳಿ ಕಾಂಗ್ರೆಸ್ ನೇಪಾಳಿ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ -ಲೆನಿನ್‌ವಾದಿ) ದ ಸಮ್ಮಿಶ್ರ ಸರ್ಕಾರದ ಪತನ ಸನ್ನಿಹಿತವಾಗಿದೆ. ತನ್ನ ಜತೆ ಮಾಡಿದ ಕಾರ್ಯಕ್ರಮ ಜಾರಿ ಮಾಡಲು ವಿಫಲವಾಗಿದೆ ಎಂಬ ಕಾರಣಕ್ಕೆ ಎಂಎಲ್ ಪಕ್ಷ ಸರ್ಕಾರದಿಂದ ಬೆಂಬಲ ವಾಪಸು ತೆಗೆದುಕೊಳ್ಳಲು ನಿರ್ಧರಿಸಿದೆ. ಈ ಪಕ್ಷದ ಎಲ್ಲಾ 13 ಮಂತ್ರಿಗಳು ರಾಜೀನಾಮೆ ನೀಡಿದ್ದಾರೆ.

ಪ್ರಧಾನ ಮಂತ್ರಿ ಕೋಯಿರಾಲ ರಾಜೀನಾಮೆ ನೀಡುವ ನಿರ್ಧಾರ ಮಾಡಿದ್ದು, ಈಗಾಗಲೇ ಬದಲಿ ಸರ್ಕಾರದ ಬಗ್ಗೆ ಪ್ರಯತ್ನಿಸುತ್ತಿದ್ದಾರೆ. ಎಂ.ಎಲ್. ಬದಲು ಯು.ಎಂ.ಎಲ್., ಎನ್‌ಡಿಸಿ, ಸದ್ಭಾವನಾ.. ಸೇರಿ ಸಮ್ಮಿಶ್ರ ಸರ್ಕಾರ ರಚಿಸಲು ನೇಪಾಳಿ ಕಾಂಗ್ರೆಸ್ ನಿರ್ಧರಿಸಿತು ಎನ್ನಲಾಗಿದೆ. ಇನ್ನು ಮುಂದಿನ ಚುನಾವಣೆಗೆ ಕೇವಲ 11 ತಿಂಗಳು ಉಳಿದಿದ್ದು, ನೇಪಾಳಿ ರಾಜ ಏನು ಕ್ರಮ ಕೈಗೊಳ್ಳುತ್ತಾರೆ ಎಂದು ಕಾದು ನೋಡಬೇಕಾಗಿದೆ. ಯು.ಎಂ.ಎಲ್. ಮತ್ತು ಎಂಎಲ್ ನಡುವೆ ಇತ್ತೀಚಿನ ಮತಭೇದ, ಅನೈಕ್ಯತೆಯನ್ನು ಬಳಸಿ ನೇಪಾಳಿ ಕಾಂಗ್ರೆಸ್ ಆಳುತ್ತಿದೆ. ಈ ಎರಡೂ ಪಕ್ಷಗಳು ಸೇರಿದರೆ ಅತಿ ದೊಡ್ಡ ಕೂಟವಾಗುತ್ತದೆ. ಮಾತ್ರವಲ್ಲ ಮುಂದಿನ ಚುನಾವಣೆಯಲ್ಲಿ ಸ್ಪಷ್ಟ ಬಹುಮತದ ಛಾನ್ಸು ಇದೆ. ಆದರೂ ದೇಶವನ್ನು ಅರಾಜಕತೆಗೆ ಒಯ್ಯಲಾಗುತ್ತಿದೆ ಎಂಬುದು ದುರಾದೃಷ್ಟ.

ಕ್ರೂರ ಪಶುಗಳು ಬಿದ್ದವೋ

ಬೆಳಗದ ಕಣ್ಣನು ಕಳೆದುಕೊಂಡಿಹ
ಆಳುವಾತರ ಕ್ರೌರ್ಯವ
ತಾಳಲಾರದೆ ಮನದ ನೋವನು
ಕೇಳಿಹೇಳುವೆ ಗೆಳೆಯರೆ

ಓಟು ಕೊಳ್ಳಲು ನೋಟು ನೀಡುವ
ಕೋಟಿ ಪತಿಗಳ ಕೂಟಕೆ
ತುಟಿಯ ಬಿಚ್ಚದೆ ಕತ್ತು ಬಾಗುವ
ಲೂಟಿ ಮಾಡಲು ಬಿಟ್ಟರೋ

ತಲೆತಲಾಂತರದಿಂದ ದೇಶದಿ
ಕುಲವು ಕೋಮುಗಳೆನ್ನದೆ
ಗೆಳೆಯರಂದದಿ ಕಲೆತುಬಾಳಿದ
ನೆಲದಿ ಬಿರುಕನು ತಂದರೋ.

ಅಲ್ಲ ಈಶ್ವರರೊಂದುಗೂಡಿರೆ
ಅಲ್ಲಿ ಬುಡಾನ್ಗಿರಿ ಬೆಟ್ಟದಿ ಎಂಬಲ್ಲಿ
ಎಲ್ಲ ಕುಹಕಿಗಳೊಂದು ಸೇರುತ
ಕಲ್ಲು ತೂರಲು ಹೊರಟರೋ

ನೀರು ಗಾಣದ ದೇವರೆಲ್ಲೆಡೆ
ದಾರಿ ದಾರಿಯೊಳ್ಗಿದ್ದಿರೆ
ರಾಮ ಮಂದಿರವೆಂದು ಮುಗ್ಧರ
ಇರಿದು ನೆತ್ತಾರು ಸುರಿದರೋ

ಹರೆಯ ಜನಗಳ ಎತ್ತಿ ಕಟ್ಟುತ
ಉರಿವ ಬೆಂಕಿಗೆ ನೂಕುತ
ಘೋರ ಪಾತಕಿ ಸ್ವಾರ್ಥ ಧೂರ್ತರು
ಮರೆಯ ಸೇರುತ ನಕ್ಕರೋ

ಪತನ ಮಾಡುತ ಇತರೆ ಕೋಮಿನ
ಮನಿತೆ ಮಣಿಗಳ ಶೀಲವ
ಕ್ರೂರ ಪಶುಗಳ ತೆರದಿ ಈ ಜನ
ಕ್ರೌರ್ಯ ಮೆರೆದರೊ ಸುತ್ತಲು

ಕಾಳ ಶಾಸನ ನೆಚ್ಚುತ
ಇಲ್ಲಿ ದೀನರ ಹರೆಯ ಹೆಣ್ಣನು
ಸೆಳೆದು ಶೀಲವ ಕೊಂದರೋ
ನಾರಿ ಮಣಿಯರ ಮೀಸಲಾತಿಯ
ಜಾರಿಮಾಡುವ ಮಾತನು
ತೂರಿಬಿಟ್ಟರೊ ಗಾಳಿಯೆದುರಿಗೆ

ಹಾರಿಮರೆಯನು ಸೇರಿತೋ
ತರುಣ ಜನರಿಗೆ ಕೆಲಸ ಕೊಡಿಸಲು
ಭರದಿ ಭರವಸೆ ನೀಡುತ
ನರಿಗಳಂದದಿ ಸ್ವಾರ್ಥ ಸಾಧಿಸಿ
ಗೋರಿಗೆಸೆದರೊ ಭರವಸೆ

ತುತ್ತು ಕೂಳಿಗೆ ಕತ್ತು ಬಾಗಿಸಿ
ನಿತ್ಯದುಡಿಯುವ ಬಡವಗೆ
ಇತ್ತ ಬೆಲೆಗಳ ಗಗನ ಕೇರಿಸಿ
ಕತ್ತು ಹಿಚುಕಲು ಹೊರಟರೋ.

ಇರುಳು ಹಗಲೊಳು ದೀನ ಕೂಲಿಯು
ಬೆವರು ಸುರಿಸುತ ದುಡಿದುದ
ಕರುಣೆ ಇಲ್ಲದ ದೊರೆಗೆ ಎಲ್ಲವ
ಹರಿದು ತಿನ್ನಲು ಬಿಟ್ಟರೋ

ಹಸಿದ ಜನಗಳು ನಾಲ್ಕು ರಾಜ್ಯದಿ
ಕಸುವನೆಲ್ಲವ ಕೂಡಿಸಿ
ಮಸೆದು ಬಾಣವ ಎಸೆಯೆ ನೇರಕೆ
ಕ್ರೂರ ಪಶುಗಳು ಬಿದ್ದವೋ.

- ವಿಡಂಬಾರಿ

ವಾರದ ವ್ಯಂಗ್ಯಚಿತ್ರ

'ದಿ ಹಿಂದು'ನಲ್ಲಿ ಕೇಶವ್



ಬ್ಯಾಂಕಾಂಕ್ ಏಶ್ಯಾಡ್‌ನಲ್ಲಿ ಭಾರತಕ್ಕೆ 9ನೇ ಸ್ಥಾನ





ಥೈಲಾಂಡ್ ರಾಜಧಾನಿ ಬ್ಯಾಂಕಾಂಕ್‌ನಲ್ಲಿ 13ನೇ ಏಶಿಯಾ ಕ್ರೀಡಾ ಕೂಟಕ್ಕೆ ಡಿಸೆಂಬರ್ 20 ರಂದು ತೆರೆಬಿತ್ತು. 41 ಏಶ್ಯನ್ ದೇಶಗಳು ಭಾಗವಹಿಸಿದ ಈ ಕ್ರೀಡಾ ಕೂಟದಲ್ಲಿ ಜನಸಂಖ್ಯೆಯು ಪ್ರಕಾರ ಎರಡನೇ ಸ್ಥಾನದಲ್ಲಿರುವ ಭಾರತ ಪದಕ ಪಟ್ಟಿಯಲ್ಲಿ 9ನೇ ಸ್ಥಾನ ಪಡೆಯಿತು. 1994 ರ ಹಿರೋಶಿಮಾ ಏಶ್ಯಾಡ್‌ನಲ್ಲಿ ಭಾರತ 8ನೇ ಸ್ಥಾನ ಪಡೆದಿದ್ದರೂ ಈ ಬಾರಿ 12 ಹೆಚ್ಚು ಪದಕಗಳನ್ನು ಪಡೆದು ದೇಶದ ಕ್ರೀಡಾಭಿಮಾನಿಗಳು ತುಸು ಸಂತೋಷಪಡುವಂತಾಗಿದೆ.

ಹಿರೋಶಿಮಾ ಏಶ್ಯಾಡ್‌ನಲ್ಲಿ ಭಾರತ 4 ಚಿನ್ನ, ಮೂರು ಬೆಳ್ಳಿ ಹಾಗೂ 16 ಕಂಚಿನ ಪದಕಗಳನ್ನು ಪಡೆದಿತ್ತು. ಈ ಬಾರಿ ಅದು 7 ಚಿನ್ನದ ಪದಕಗಳನ್ನು, 11 ಬೆಳ್ಳಿ ಹಾಗೂ 17 ಕಂಚಿನ ಪದಕಗಳನ್ನು ಪಡೆಯುವಷ್ಟು ಮುನ್ನಡೆ ಸಾಧಿಸಿದೆ. ಭಾರತ ಏಶ್ಯಾಡ್‌ನಲ್ಲಿ ಹಾಕಿ ಸ್ಪರ್ಧೆಯಲ್ಲಿ ತನ್ನ ಹಿರಿಮೆಯ ಸ್ಥಾನವನ್ನು ಮತ್ತೆ ಪಡೆಯುವಂತಾದ್ದು ಈ ಬಾರಿಯ ಮುನ್ನಡೆಯ ಒಂದು ವಿಶಿಷ್ಟತೆ. 32 ವರ್ಷಗಳ ನಂತರ ಭಾರತ ಹಾಕಿಯಲ್ಲಿ ಮತ್ತೆ ಚಿನ್ನದ ಪದಕ ಗೆದ್ದಿದೆ.

ಭಾರತ ಪುರುಷರ ಹಾಕಿಯಲ್ಲದೆ, ಕಬ್ಬಡ್ಡಿ, ಬಿಲಿಯರ್ಡ್ಸ್‌ನಲ್ಲಿ ಎರಡು, ಅಥ್ಲೆಟಿಕ್ಸ್‌ನಲ್ಲಿ ಎರಡು, ಬಾಕ್ಸಿಂಗ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದಿದೆ.

ಅಥ್ಲೆಟಿಕ್ಸ್‌ನಲ್ಲಿ 5, ಶೂಟಿಂಗ್‌ನಲ್ಲಿ 2, ಭಾರ ಎತ್ತುವ ಸ್ಪರ್ಧೆಯಲ್ಲಿ 2, ಮಹಿಳಾ ಹಾಕಿ ಹಾಗೂ ಬಿಲಿಯರ್ಡ್ಸ್ ಸಿಂಗಲ್ಸ್‌ನಲ್ಲಿ ಒಟ್ಟು 11 ಬೆಳ್ಳಿ ಪದಕಗಳನ್ನು ಗೆದ್ದಿದೆ.

ಕಂಚಿನ ಪದಕ ಗಳಲ್ಲಿ - ಅಥ್ಲೆಟಿಕ್ಸ್(7), ಟೆನ್ನಿಸ್ (4), ದೋಣಿ ಪಂದ್ಯ(ರೋಯಿಂಗ್)(2), ಬಿಲಿಯರ್ಡ್ಸ್(1), ಅಶ್ವಾರೋಹಿ ತಂಡ(1), ಶೂಟಿಂಗ್(1) ಹಾಗೂ ಬಾಕ್ಸಿಂಗ್ (1)

13ನೇ ಏಶ್ಯಾಡ್‌ಲ್ಲಿ ಭಾಗವಹಿಸಿದ 41 ದೇಶಗಳಲ್ಲಿ 33 ದೇಶಗಳು ಪದಕಪಟ್ಟಿಯಲ್ಲಿ ಸ್ಥಾನ ಪಡೆದಿವೆ. ನಮ್ಮನೆರೆಯ ದೇಶಗಳಲ್ಲಿ ಶ್ರೀಲಂಕಾಕ್ಕೆ 3 ಚಿನ್ನ, 3 ಕಂಚಿನಿಂದ 15 ನೇ ಸ್ಥಾನ, ಪಾಕಿಸ್ತಾನಕ್ಕೆ 2 ಚಿನ್ನ, 4 ಬೆಳ್ಳಿ ಹಾಗೂ 9 ಕಂಚಿನಿಂದ 16ನೇ ಸ್ಥಾನ, ಮ್ಯಾನ್‌ಮಾರ್‌ಗೆ 1 ಚಿನ್ನ, 6 ಬೆಳ್ಳಿ ಹಾಗೂ 4 ಕಂಚುಗಳಿಂದ 20ನೇ ಸ್ಥಾನ, ನೇಪಾಳಕ್ಕೆ 1 ಬೆಳ್ಳಿ ಮತ್ತು 3 ಕಂಚುಗಳಿಂದ 27ನೇ ಸ್ಥಾನ ಹಾಗೂ ಒಂದು ಕಂಚು ಪಡೆದ ಬಾಂಗ್ಲಾದೇಶಕ್ಕೆ 30ನೇ ಸ್ಥಾನ ದೊರೆತಿದೆ.

ಪದಕ ಪಟ್ಟಿಯಲ್ಲಿ


ಸ್ಥಾನ ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1. ಚೀಣಾ	129	77	68	274
2. ದಕ್ಷಿಣ ಕೊರಿಯಾ	65	47	52	164
3. ಜಪಾನ್	52	61	68	181
4. ಥೈಲೆಂಡ್	24	26	40	90
5. ಕಝಾಕಿಸ್ತಾನ್	24	24	30	78
6. ಚೀಣೀ ತೈಪೇಯಿ	19	17	41	77
7. ಇರಾನ್	10	11	13	34
8. ಉತ್ತರ ಕೊರಿಯಾ	7	14	12	33
9. ಭಾರತ	7	11	17	35

ಚಿನ್ನದ ಪದಕ ಗೆದ್ದವರು

ಜ್ಯೋತಿರ್ಮಯಿ ಸಿಕ್ದರ್(2)	1500 ಮಿ. ಓಟ 800 ಮಿ. ಓಟ
ಅಶೋಕ್ ಶಾಂಡಿಲ್ಯ	ಬಿಲಿಯರ್ಡ್ಸ್ ಸಿಂಗಲ್ಸ್
ಗೀತ್ ಸೇಠಿ ಮತ್ತು ಅಶೋಕ್ ಶಾಂಡಿಲ್ಯ	ಬಿಲಿಯರ್ಡ್ಸ್ ಡಬಲ್ಸ್
ಡಿಕ್ಕೋ ಸಿಂಗ್	ಬಾಕ್ಸಿಂಗ್ 54 ಕೆ.ಜಿ.
ಪುರುಷರ ಹಾಕಿ ತಂಡ	ಕ್ಯಾಪ್ಟನ್ ಧನರಾಜ್ ಪಿಳ್ಳೆ
ಕಬ್ಬಡ್ಡಿ ತಂಡ	ಕ್ಯಾಪ್ಟನ್ ವಿಶ್ವಜಿತ್ ಪಾಲಿಟ್


ಇದೀಗ ಪ್ರಕಟವಾಗಿದೆ

ನಮ್ಮನ್ನು ಈ ವರ್ಷ ಅಗಲಿದ ಪ್ರೀತಿಯ ಮಾಸ್ತು ಕಾಂ. ಪಿ.ರಾಮಚಂದ್ರರಾವ್‌ರವರ ಬಹುವರ್ಣದ ಫೋಟೋ ಉಳ್ಳ 1999ರ ಕ್ಯಾಲೆಂಡರನ್ನು 'ಕ್ರಿಯಾ ಪ್ರಕಾಶನ' ಹೊರತಂದಿದೆ. ಉತ್ತಮ ಕಾಗದದ ಮೇಲೆ ಮುದ್ರಗೊಂಡಿರುವ ಇದರ ಬೆಲೆ ರೂ. 10/-. ಹೆಚ್ಚಿನ ಸಂಖ್ಯೆಯಲ್ಲಿ ಇದನ್ನು ತರಿಸಿ ಕೊಳ್ಳಬಯಸುವವರು ಮುಂಗಡ ಹಣ ನೀಡಿದರೆ ಸೂಕ್ತ ರಿಯಾಯಿತಿಗಳನ್ನು ನೀಡುವುದಾಗಿ 'ಕ್ರಿಯಾ ಪ್ರಕಾಶನ' ತಿಳಿಸಿದೆ. ಹೆಚ್ಚಿನ ವಿವರಗಳಿಗೆ 'ಐಕ್ಯರಂಗ' ವನ್ನು 'ಐಕ್ಯರಂಗ'ದ ವಿಳಾಸದಲ್ಲಿ ಸಂಪರ್ಕಿಸಿ



ಭರದಿಂದ ಮಾರಾಟವಾಗುತ್ತಿದೆ

ಇ.ಎಂ.ಎಸ್. ಭವನ ನಿಧಿ



ಈಗಾಗಲೇ 'ಐಕ್ಯರಂಗ'ದಲ್ಲಿ ತಿಳಿಸಿರುವಂತೆ ಎ.ಕೆ.ಜಿ.ಸ್ಮಾರಕ ದತ್ತಿಯ ಇ.ಎಂ.ಎಸ್. ಭವನದ ನಿಧಿ ಸಂಗ್ರಹ ಭರದಿಂದ ಸಾಗಿದ್ದು ಈಗಾಗಲೇ ಸುಮಾರು 9 ಲಕ್ಷ ರೂಪಾಯಿಗಳ ಸಂಗ್ರಹವಾಗಿದೆ. ಈ ವಾರದಿಂದ ಈ ಕಾಲಂನಲ್ಲಿ ಈ ನಿಧಿಗೆ ಉದಾರ ಕೊಡುಗೆ ನೀಡಿದವರ ಹೆಸರುಗಳನ್ನು ಪ್ರಕಟಿಸಲಾಗುತ್ತಿದೆ.

ನರಹರಿ	ರೂ. 500
ನಾರಾಯಣ ಸ್ವಾಮಿ	500
ಸತೀಶ್ ಚಂದ್ರ	1000
ಶಂಕರಪ್ಪ	5000
ಕೆ.ಆರ್.ವೆಂಕಟೇಶ ಗೌಡ	10,000
ಎನ್.ಕೆ.ಉಪಾಧ್ಯಾಯ	10,000
ಗಣಪತಿ ಹೆಗ್ಡೆ	500
ಪಿ.ರಾಮಚಂದ್ರರಾವ್ ಅವರಿಂದ ಸಂಗ್ರಹ	55,000
ಬೆಂಗಳೂರು ಎಲ್‌ಐಸಿ ಸಂಗಾತಿಗಳು	20,000
ಇ.ಕೆ.ಎನ್.ರಾಜನ್	5000
ಜಿ.ರಾಮಯ್ಯ	1000
ರೋನಾಲ್ಡ್ ವಾಜ್ ಸಂಗ್ರಹ	5,000
ಆರ್.ವಿ.ಆಚಾರಿ	10,000
ಶೋಭಾಕುಮಾರಿ	10,000
ಉಷಾ	10,000
ಎನ್.ಕೆ.ಉಪಾಧ್ಯಾಯ ಸಂಗ್ರಹ	10,000
ಸಿಪಿಐ(ಎಂ) ಮೈಸೂರು	5,000
ಶೇಷ್‌ಮಲ್	10,000
ಟಿ.ಎನ್.ಶಿವರೆಡ್ಡಿ	5000
ನಾಗಮೋಹನ ದಾಸ್	5000
ಪಿ.ಕೆ.ಸುಬ್ರಮಣಿ	1000
ಕೆ.ಎಸ್.ಸುಬ್ರಮಣ್ಯ	2000
ಕೆ.ಆರ್.ನಾಗರಾಜ್	501
ಎಸ್.ಎಸ್.ರಾವ್ ಸಂಗ್ರಹ	53,500
ಸಿಪಿಐ(ಎಂ), ಗುಲ್ಬರ್ಗ	5000
ವಿಕ್ರಾಂತ್ ಟೈರ್ಸ್ ನೌಕರ ಸಂಘ	52,000
ದಿವಾಕರನ್	5,000
ಸಿಪಿಐ(ಎಂ), ಧಾರವಾಡ	3,500
ರೇವಣ್ಣ ಸಂಗ್ರಹ	20,000
ವಸಂತರಾಜ್	10,000
ಸಿಪಿಐ(ಎಂ) ರಾಯಚೂರು	4,000
ಸಿಪಿಐ(ಎಂ) ಉ.ಕ.	3,400
ಸಿ.ಆರ್.ಭಟ್	5,000
ಕೃಷ್ಣಮೂರ್ತಿ	1,000

ಮುಂದುವರಿಯುವುದು

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ